Karnataka Debt Relief Bill, 1976

Motion to consider—(Debate continued)

ಶ್ರೀ ಕಾಗೋಡು ತಿಮ್ಮಪ್ಪ.—(ಸಾಗರ) ಅಧ್ಯಕ್ಷರೇ, ಈ ಋಣ ಪರಿಹಾರ ವಿಧೇಯಕವನ್ನು ನಾನು ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ ಜೊತೆಗೆ ಸುಗ್ರೀವಾಜ್ಞೆಯಲ್ಲಿ ಏನು ಕೆಲವು ಅಂಶಗಳನ್ನು ಒಳಪಡಿಸಿದ್ದರೋ ಅದಕ್ಕೆ ಮಾರ್ಪಾಡುಗಳನ್ನು ಮಾಡಿ ಈ ವಿಧೇಯಕವನ್ನು ತಂದಿದ್ದಾರೆ. ಅದಕ್ಕೂ ಕೂಡ ಸರ್ಕಾರಕ್ಕೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಇದರಲ್ಲಿ ಯಾರು ಸಾಲದಿಂದ ವಿಮೋಚನೆ ಹೊಂದುತ್ತಾರೆ ಎನ್ನುವುದರ ಬಗ್ಗೆ ಕೆಲವು ವರ್ಗದ ಜನರ ಪಟ್ಟಿಯನ್ನು ಮಾಡಿದ್ದಾರೆ. ಹೆಚ್ಚು ಕಡಿಮೆ ಈ ವಿಧೇಯಕದಿಂದ, ಯಾರು ಆರ್ಥಿಕವಾಗಿ ದುರ್ಬಲರಾಗಿದ್ದಾರೋ ಅವರಿಗೆ ಬಹಳ ಪ್ರಯೋಜನವಾಗುತ್ತದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ದುರ್ಬಲ ವರ್ಗಕ್ಕೆ ಈ ಒಂದು ನೆರವನ್ನು ಕೊಡಬೇಕು ಎನ್ನತಕ್ಕದು ಇದರ ಮೂಲ ಉದ್ದೇಶ ಎಂದು ನಾನಾದರೂ ಕೂಡ ಇದನ್ನು ಸ್ವಾಗತ ಮಾಡಿದ್ದೇನೆ. ಋಣ ಪರಿಹಾರ ಕಾನೂನು ಜಾರಿಗೆ ಬಂದಮೇಲೆ ಇವತ್ತು ಹಳ್ಳಿಗಾಡುಗಳಲ್ಲಿ ಕೆಲವುಭಾಗದಲ್ಲಿ ಸಾಕಷ್ಟು ಸಾಲ ಸಿಕ್ಕುತ್ತಿಲ್ಲ ಎನ್ನತಕ್ಕ ಭಾವನೆಗಳು ಮೂಡುತ್ತಿವೆ ಈ ಮಸೂದೆಯ ತತ್ವವನ್ನು ಜನರಲ್ಲಿ ನಾವು ರೂಢಿಸಬೇಕಾದರೆ ಮೊದಲು ನಾವು ತತ್ವಕ್ಕೆ ಕಂಕಣಬದ್ಧರಾಗಿರಬೇಕಾಗುತ್ತದೆ. We have to commit ourselves to the programme. ಇದಕ್ಕೆ ತೀವ್ರವಾಗಿ ಕಟ್ಟು ಬಿದ್ದರೆ ಮಾತ್ರ ನಾವು ಇಂಥ ಶಾಸನಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದಕ್ಕೆ ಸಾಧ್ಯ. ಇವತ್ತು ಇಂಥ ಋಣ ಪರಿಹಾರ ಕಾಯಿದೆ ಬಂದರೂ, ಸಂಪೂರ್ಣವಾಗಿ ಸಾಲದಿಂದ ಯಾವ ವರ್ಗದ ಜನರನ್ನು ಮುಕ್ತರಾಗಿ ಮಾಡಬೇಕು ಎಂದು ಕಾನೂನಿನಲ್ಲಿದೆಯೋ ಆ ಜನರು ಇವತ್ತು ನಿರ್ಭೀತರಾಗಿ ಪರಿಹಾರವನ್ನು ಪಡೆಯಬೇಕು ಎನ್ನತಕ್ಕ ಧೈರ್ಯ ಇನ್ನೂ ಜನರಿಗೆ ಬಂದಿಲ್ಲ. ಹೆಚ್ಚು ಕಡಿಮೆ ಗೇಣಿದಾರರ ಸಮಸ್ಯೆ ಬಂದಾಗಲೆಲ್ಲಾ ಈ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ, ಕಳೆದ ೨೦ ವರ್ಷಗಳಿಂದ ಗೇಣಿಯನ್ನು ಕೊಟ್ಟಿದ್ದಾರೆ, ರಸೀತಿಯನ್ನು ತಗೆದುಕೊಳ್ಳುತ್ತಾ ಇರಲಿಲ್ಲ ಮತ್ತು ಪಾಣಿಯನ್ನು ಬರಸಿಕೊಳ್ಳುತ್ತಾ ಇರಲಿಲ್ಲ. ಎಲ್ಲಾ ಕೈಬಿಟ್ಟು ಹೋಗಿವೆ. ಏಕೆಂದರೆ ಯಾವ ಒಂದು ವರ್ಗಕ್ಕೆ ಈ ಒಂದು ಕಾನೂನಿನ ಸವಲತ್ತು, ನ್ಯಾಯ ಸಿಕ್ಕಬೇಕೋ ಆ ವರ್ಗದಲ್ಲಿ ಜನರಿಗೆ ಸಾಕಷ್ಟು ಪ್ರಜ್ಞೆ, ಜಾಗೃತಿ, ಮತ್ತು ಸಂಘಟನೆ ಇಲ್ಲ. ಇದು ಇಲ್ಲದೇ ಹೋದರೆ ಯಾವ ರೀತಿಯ ಕಾನೂನನ್ನು ಮಾಡಿದರೂ ಕೂಡ ಅದರ ಪ್ರಯೋಜನವನ್ನು ಅವರು ಪಡೆಯುವುದಿಲ್ಲ. ಮತ್ತು ಇದರ ಪ್ರತಿಫಲ ಅವರಿಗೆ ತಲುಪುವುದಿಲ್ಲ ಇದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಹೇಳಬಹುದಾಗಿದೆ. ಬೆಂಗಳೂರು ಜಿಲ್ಲೆಯಲ್ಲಿ ಒಬ್ಬ ಜಿಲ್ಲಾಧಿಕಾರಿಗಳು ಎಲ್ಲಾ ಪ್ರದೇಶಕ್ಕೂ ಮೈಕ್ ಹಾಕಿಕೊಂಡು ಪ್ರಚಾರ ಮಾಡಿದರು, ಮತ್ತು ನೇರವಾಗಿ ಜನರಿಗೆ ಭೂಸುಧಾರಣೆಯ ಬಗ್ಗೆ ಹೇಳಿದರು. ಇದೇ ಕೆಲಸವನ್ನು ಒಬ್ಬ ತಹಸೀಲ್ದಾರ್ ಮಾಡಬಹುದಿತ್ತು, ಆತನು ಮಾಡುವುದಕ್ಕೆ ಆಗಿಲ್ಲ. ತದನಂತರ ಸಾರೋದ್ಧಾರವಾಗಿ ಮಾಡಬೇಕಾದಂಥ ಕೆಲಸಗಳು ಏನು ಇವೆಯೋ, ಅವುಗಳನ್ನೂ ಮತ್ತು ಕಾನೂನು ಪ್ರಕಾರ ಸರ್ಕಾರದ ನೆರವು ಏನು ತಲುಪಬೇಕೋ ಅದನ್ನು ಜನರಿಗೆ ತಲುಪಿಸುವುದಕ್ಕೆ ಸತತವಾಗಿ ಕೆಲಸ ಮಾಡಬೇಕು ಎನ್ನುವ ಕಮಿಟ್‌ಮೆಂಟ್, ಜೀಲ್, ಪ್ರಾಮಾಣಿಕತನ ಅನೇಕ ಅಧಿಕಾರಿಗಳಿಗೆ ಇಲ್ಲ. ಅಧ್ಯಕ್ಷರೇ ಇದಕ್ಕೆ ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ ಈಗ ನಾವು ಒಂದೂ ಕಾನೂನನ್ನು ಮಾಡಿದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಅದನ್ನು ನೋಡಿಕೊಳ್ಳುತ್ತಾರೆ ಬೇರೆಯವರು ಅದಕ್ಕೆ ಸಂಬಂಧವಿಲ್ಲ ಎನ್ನುವ ಹಾಗೆ ಇರುತ್ತಾರೆ. ಈಗ ಪೋಲೀಸ್ ಅಧಿಕಾರಿಗಳು ಇರುತ್ತಾರೆ, ಅವರಿಗೆ ಜಮೀನಿಗೆ ಸಂಬಂಧಪಟ್ಟ ಕಾನೂನುಗಳು ಏನೇನು ಇವೆಯೆಂದು ಸರ್ಕಾರದಿಂದ ಸರ್ಕ್ಯುಲರ್ಸ್ ಹೋದರೂ ಅನೇಕ ಸಂದರ್ಭಗಳಲ್ಲಿ ಅವರಿಗೆ ಗೊತ್ತಿರುವುದಿಲ್ಲ. ಹೋಂ ಡಿಪಾರ್ಟ್‌ಮೆಂಟಿನಿಂದ ಎಲ್ಲಾ ಸಬ್‌ಇನ್‌ಸ್ಪೆಕ್ಟರಿಗೂ ಇದು ಹೋಗಿರುತ್ತದೆ. ಆದರೂ ಅವರು ಇದು ನಮಗೆ ಏನು ಸಂಬಂಧ ಎಂದು ರಕ್ಷಣೆ ಕೊಡುವುದಿಲ್ಲ. ಆದ್ದರಿಂದ ಸಮಾಜದಲ್ಲಿ ಸಾಕಷ್ಟು ಪ್ರಜ್ಞೆ, ಸಂಘನೆ ಇಲ್ಲದೆ ಇರುವುದರಿಂದ ಸರ್ಕಾರದಿಂದ ಯಾವ ಯಾವ ಕಾನೂನನ್ನು ಮಾಡಿ, ಅದರ ಪ್ರತಿಫಲವನ್ನು ಜನರಿಗೆ ತಲುಪಿಸಬೇಕೋ ಅದು ಇವತ್ತಿನವರೆಗೂ ಅವರಿಗೆ ತಲುಪುವುದಕ್ಕೆ ಆಗಿಲ್ಲ. ೧೯೬೪ರಲ್ಲಿ ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಕಾನೂನನ್ನು ಮಾಡಿದರು. ಅದರ ಪ್ರಕಾರ ಮಲೆನಾಡು ಪ್ರಿವಿಲೇಜಸ್ ಅನ್ನು ತೆಗೆದುಹಾಕಿದರು. ಹಿಂದೆ ಮಲೆನಾಡಿನ ಜನರು ನಾಟವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲ ಇತ್ತು. ಈ ಒಂದು ಕಾನೂನನ್ನು ಮಾಡಿ ೧೨೦೦ ರೂಪಾಯಿಗಳಿಗಿಂತ ಕೆಳಗೆ ಆದಾಯ ಯಾರಿಗೆ ಇದೆಯೋ ಅಂಥವರು ೧೦೦ ಅ

ನಾಟವನ್ನು ಗೊತ್ತುಪಡಿಸಿರತಕ್ಕ ಅರಣ್ಯದಿಂದ ಪಡೆಯುವುದಕ್ಕೆ ಅವಕಾಶವಿದೆ. ಇದರ ಪ್ರಕಾರ ನಾವು ಅರ್ಜಿಯನ್ನು ಕೊಟ್ಟರೆ ಡಿ. ಎಫ್. ಒ. ಅವರು ಇದಕ್ಕೆ ಕಾನೂನು ಇಲ್ಲ ಎಂದು ಹೇಳಿದರು. ನಾವು ಗವರ್ನಮೆಂಟ್ ನೋಟಿಫಿಕೇಷನ್ ಅನ್ನು ತೆಗೆದು ಕೊಂಡು ಹೋಗಿ ಕೊಟ್ಟಮೇಲೂ ಅವರು ಸೆಕ್ರೆಟರಿಯೇಟ್‌ಗೆ ಬರೆದು. ಇವರು ಕೊಡಬಹುದು ಎಂದು ಹೇಳಿದ ಮೇಲೆ ಒಂದು ತಿಂಗಳು ಆದ ನಂತರ ನಾಟವನ್ನು ಕಡಿಯುವುದಕ್ಕೆ ಅವಕಾಶ ಮಾಡಿಕೊಟ್ಟರು. ಇದು ಸ್ಥಳದಲ್ಲಿ ಇರತಕ್ಕಂಥ ಯಂತ್ರ ಎಷ್ಟರಮಟ್ಟಿಗೆ ಇಂಥಹ ಶಾಸನಗಳ ಪ್ರತಿಫಲವನ್ನು ಜನಗಳ ಸಹಾಯಕ್ಕೆ ತಂದುಕೊಡುತ್ತೀರಿ ಎಂಬುದಕ್ಕೆ ಇದು ಒಂದು ಉದಾಹರಣೆ. ಇವತ್ತು ನೀವು ಅವನಿಗೆ ಏನು ಹೇಳಬೇಕೆಂದರೆ, ಇಂಥ ಒಂದು ಶಾಸನ ಬಂದಿದೆ, ಇದು ನಿಮಗೆ ಗೊತ್ತಿದೆಯೋ ? ನಿಮಗೆ ಇದ್ದ ಸಾಲವೆಲ್ಲಾ ಮುಕ್ತಾಯವಾಯಿತು ಎಂದು ಹೇಳಬೇಕು ಅವನು ಇದನ್ನು ತಾನೇ ತಿಳಿದುಕೊಳ್ಳುವ ಪ್ರಜ್ಞೆ ಇಲ್ಲ. ಕೊಟ್ಟ ಸಾಲವನ್ನು ತೀರಿಸದೇ ಹೋದರೆ ನಾನು ಸ್ವರ್ಗಕ್ಕೆ ಹೋಗುವುದಿಲ್ಲ ಈ ಪಾಪವನ್ನು ಏತಕ್ಕೆ ಹೊತ್ತುಕೊಂಡು ಹೋಗಲಿ ಎನ್ನುವ ಭಾವನೆ ಅವನಿಗೆ ಇದೆ. ಇಂಥ ಒಂದು ಭೂತ ಅವನ ತಲೆಯ ಮೇಲೆ ಕೂತಿದೆ.

ಶ್ರೀ ಕೆ. ಬಿ. ಶಿವಯ್ಯ.—ಇಂಥ ಸೆಂಟಿಮೆಂಟ್ ಇರುವವರು ಎಷ್ಟು ಜನರಿದ್ದಾರೆ ?

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಪರ್ಸೆಂಟ್ ಇರಬಹುದು. ಇವತ್ತು ನೀವು ಕೊಡುವ ಸಾಲ ಮುಕ್ತಾಯವಾಗಿದೆ ಎಂದೆ ನಿಮ್ಮ ಮುಖಂಡರು, ಸಮಾಜದಲ್ಲಿ ಮುಖ್ಯಸ್ಥರು ನೇರವಾಗಿ ಅವನಿಗೆ ಹೇಳಬೇಕು ಅವನಿಗೆ ಸಾಲ ಸಿಕ್ಕುವುದಿಲ್ಲ ಎಂಬ ಭಯ ಇದೆ. ಇವತ್ತು ಯಾರು ಹಳ್ಳಿಯಲ್ಲಿ, ಪೇಟೆಯಲ್ಲಿ ಸಾಲ ಕೊಟ್ಟಿರುವವರಿದ್ದಾರೆ, ಅವರೇ ಹೋಗಿ ಈಗ ಸಾಲ ಕೊಡುವವರು ಯಾರೂ ಇಲ್ಲ, ಸಾಲ ಸಿಕ್ಕುತ್ತಿಲ್ಲ ಎಂದು ಹೇಳುತ್ತಾರೆ ; ಆದರೆ ನಿಜವಾಗಿಯೂ ಕೂಡ ಸಾಲ ಮಾಡಿಕೊಂಡಿರತಕ್ಕವನ್ನು ಮುಂದೆ ಬಂದು ಹೇಳುವುದಿಲ್ಲ. ಅವನು ಹಿಂದೆ ಕೂತಿರುತ್ತಾನೆ ಸಮಾಜದಲ್ಲಿರಕ್ಕಂಥ ಜನರು ದುರ್ಬಲತೆಯನ್ನು ಉಪಯೋಗಿಸಿಕೊಂಡು ಇಂಥ ಕಾನೂನುಗಳು ಸಫಲವಾಗದ ರೀತಿಯಲ್ಲಿ ಮಾಡತಕ್ಕ ಜನರೂ ನಿದ್ದಾರೆ ಇಂಥ ಕಾನೂನುಗಳನ್ನು ಜಾರಿಗೆ ಕೊಡುವಾಗ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಯಾವಾಗಲೂ ತಲೆಯ ಮೇಲೆ ಹೊತು ಜಾರಿಗೆ ತರುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇದರಲ್ಲಿ ಕೆಲವು ವರ್ಗದ ಜನರಿಗೆ ವಿನಾಯಿತಿ ಕೊಟ್ಟಿದ್ದಾರೆ. ಗೇಣಿ ಬಾಕಿ ಇತ್ಯಾದಿ ಇದ್ದರೆ, ಇಂಥ ವಿಷಯಗಳಿಗೆ ನಾನು ಹೋಗುವುದಿಲ್ಲ. ಸೊಸೈಟಿಗಳಿಗೆ ಕೊಟ ರತಕ್ಕದ್ದು, ಇದು ಸಾರ್ವಜನಿಕ ಹಣ ; ರೆಂಟ್ ಎನ್ನತಕ್ಕದ್ದೂ ಕೂಡ ಕೊಟ್ಟಿದ್ದಾರೆ. ಇದರಲ್ಲಿ ಕೆಲವು ಭಾಗದ ಗೇಣಿಯನ್ನು ಮನ್ನಾ ಮಾಡಬೇಕಾಗಿತ್ತು ಎಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಕಾರಣ ಏನು ಎಂದು ತಾವು ಕೇಳಬಹುದು. ಭೂಸುಧಾರಣಾ ಕಾನೂನು ತಿದ್ದುಪಡಿ ತರುವುದಕ್ಕೆ ಮುಂದೆ ಅಂದರೆ ೧೯೬೫ನೇ ಇಸವಿಗೆ ಹಿಂದೆ ೩ ವರ್ಷದ ಗೇಣಿ ಮೇಲೆ ದಾವಾ ಹಾಕುವ ಅವಕಾಶ ಈ ಗೇಣಿ ಕಾನೂನಿನಲ್ಲಿ ಇತ್ತು ಗೇಣಿ ರಸೀದಿ ಕೊಡುವ ಪದ್ಧತಿ ರಾಜ್ಯದ ಅನೇಕ ಕಡೆಗಳಲ್ಲಿ ಇರಲಿಲ್ಲ. ಜನರಿಂದ ಜಮೀನನ್ನು ಬಿಡಿಸಬೇಕೆಂಬ ಉದ್ದೇಶದಿಂದ ಸಾಕಷ್ಟು ಪ್ರಮಾಣದಲ್ಲಿ ಜಮೀನ್ದಾರರು ರಸೀದಿ ಕೊಡದೇ ಇರುವ ಪದ್ಧತಿಯನ್ನು ದುರುಪಯೋಗ ಪಡಿಸಿಕೊಂಡು ಗೇಣಿ ದಾವಾ ಸ್ವೀಕೃತವಾಗಿರುವಂತಹ ಸಂಗತಿಗಳೂ ಇವೆ. ಇಂಥ ಗೇಣಿ ದಾವಾ ಸ್ವೀಕೃತವಾಗಿರುವುದು ಬಾಕಿ ಇದ್ದರೆ ಜಪ್ತಿಗೆ ಹಾಕತಕ್ಕ, ಪ್ರಸಂಗ ಇದೆ. ಈಗ್ಗೆ ೫ ವರ್ಷದ ಜಮೀನು ಬಿಟ್ಟು ಅದಕ್ಕೆ ಹಿಂದೆ ಇರತಕ್ಕ ಬಾಕಿಗಳು ಇದ್ದರೆ ಅದನ್ನೂಕೂಡ ಇದೇ ಸಂದರ್ಭದಲ್ಲಿ ಮುಕ್ತಾಯ ಮಾಡುವುದಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಗೇಣಿದಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ನಂತರ ೧೯೫೫–೫೬ನೇ ಸಾಲಿನ ಡಿಕ್ರಿಗಳೂ ಸಹ ಅನೇಕ ಕಡೆ ಇವೆ. ಅವರಿಗೂ ಕೂಡ ಈ ಭೂ ಸುಧಾರಣಾ ಕಾನೂನು ಜಾರಿಗೆ ಕೊಡಲಿಲ್ಲ, ಇದರಿಂದ ಕಂದಾಯ ಬಾಕಿ ಉಳಿಯಿತು. ಇವೆಲ್ಲಾ ಹಾಗೆಯೇ ಬಾಕಿ ಉಳಿಯುತ್ತಾ ಬಂದಿವೆ. ಈಗ ತುರ್ತು ಪರಿಸ್ಥಿತಿ ಕಾರಣದಿಂದ ಕಂದಾಯದ ಬಾಕಿ, ಗೇಣಿ ಬಾಕಿ, ಮನೆಗಂದಾಯದ ಬಾಕಿ, ವಾಟರ್ ಲೆವಿ, ಇತ್ಯಾದಿ ಎಲ್ಲಾ ಬಾಕಿಯನ್ನೂ ಏಕ ಕಾಲದಲ್ಲಿ ವಸೂಲು ಮಾಡಿದ್ದೀರಿ. ಮೊನ್ನೆ ನಾನು ಒಂದು ಹಳ್ಳಿಗೆ ಹೋದಾಗ ಒಬ್ಬ ರೈತ ತನ್ನ ಗದ್ದೆಯಲ್ಲಿ ಬಂದ ಭತ್ತವನ್ನೆಲ್ಲಾ ಮಾಡಿ ಎಷ್ಟು ಲೆವಿ ಹಾಕಿದ್ದೀರೋ ಅದನ್ನೆಲ್ಲಾ ಕೊಟ್ಟಿದ್ದಾನ. ಇದನ್ನೆಲ್ಲಾ ದೀರ್ಘವಾಗಿ ಆಲೋಚನೆ ಮಾಡಿ ಈ ಕಾನೂನಿಗೆ ಒಂದು ತಿದ್ದುಪಡಿಯನ್ನು ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಇವತ್ತಿನ ದಿವಸ ವರ್ಗದ ಜನರಿಗೆ ಅಂದರೆ ವಾರ್ಷಿಕ ಆದಾಯ ೨೪೦೦ ರೂಪಾಯಿ ಇರುವವರಿಗೆ ಈ ಕಾನೂನಿನ ಪ್ರಯೋಜನ ಸಿಕ್ಕುತ್ತಿದೆ. ಅವರು ತಮ್ಮ ಸಾಲದಿಂದ ಮುಕ್ತರಾಗುತ್ತಾರೆ. ನಾನು ಇದರ ಆಧಾರದ ಮೇಲೆ ಯಾರು ಯಾರಿಗೆ ಈ ಪರಿಹಾರ ಸಿಕ್ಕುತ್ತದೆ ಎಂದು ನೋಡಿದಾಗ ಯಾರು ವರ್ಷಕ್ಕೆ ೨೪೦೦ ರೂಪಾಯಿ ಸಂಪಾದನೆ ಮಾಡುತ್ತಾನೆ ಅವನಿಗೆ ಇದರಿಂದ ಮುಕ್ತ ಸಿಕ್ಕುತ್ತದೆ. ಈ

ಆಧಾರದ ಮೇಲೆ ಲೆಕ್ಕ ಹಾಕಿದರೆ ವ್ಯವಸಾಯಗಾರನಿಗೆ ಹೆಚ್ಚಿಗೆ ಪ್ರಯೋಜನವಾಗುವುದಿಲ್ಲ. ಹಿಂದೆ ವ್ಯವಸಾಯದ ತೆರಿಗೆ ಕಾನೂನು ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ಸರ್ಕಾರದವರು ಒಂದು ಮಾಹಿತಿಯನ್ನು ಕೊಟ್ಟಿದ್ದರು. ಅದು ಏನೆಂದರೆ ಒಂದು ಎಕರೆಯಲ್ಲಿ ಖುಷ್ಕಿ ಬೆಳೆ ಬೆಳೆದರೆ ಅದರಲ್ಲಿ ವ್ಯವಸಾಯದ ಖರ್ಚು ಅರ್ಧ ಭಾಗ ಕಳೆದರೂ ಇನ್ನೂ ಅರ್ಧ ಲಾಭ ಉಳಿಯುತ್ತದೆ ಎಂದು. ಅಂದರೆ ಖುಷ್ಕಿ ಬೆಳೆಯಲ್ಲಿ ೫೦ ರೂಪಾಯಿ ನೆಟ್ ಪ್ರಾಫಿಟ್ ಸಿಕ್ಕುತ್ತದೆ ಎಂದು ಮಾಹಿತಿ ಕೊಟ್ಟಿದ್ದರು. ಹೋಗಲಿ ೧೦೦, ೨೦೦ ಅಥವಾ ಒಂದು ಎಕರೆಗೆ ೩೦೦ ರೂಪಾಯಿ ಹುಟ್ಟುವಳಿ ಎಂದು ಲೆಕ್ಕ ಹಾಕಿದರೂ ಕೂಡ ೫ ಎಕರೆ ಇರುವವನ ಒಟ್ಟು ವಾರ್ಷಿಕ ಹುಟ್ಟುವಳಿ ೧೫೦೦ ರೂಪಾಯಿ ಆಗುತ್ತದೆ ಒಬ್ಬ ಜಮೀನು ಇಲ್ಲದೆ ೨೪೦೦ ರೂಪಾಯಿವರೆಗೆ ಪ್ರಯೋಜನವನ್ನು ಪಡೆಯುತ್ತಾ ಇರಬೇಕಾದರೆ ರೈತ ಏಕೆ ಪ್ರಯೋಜನ ಪಡೆಯಬಾರದು. ೭ ಎಕರೆವರೆಗೆ ಜಮೀನು ಇರುವವರಿಗೂ ಕೂಡ ಇದರ ಪ್ರಯೋಜನ ಸಿಕ್ಕಬೇಕು. ಹಾಗೆಯೇ ಇವತ್ತು ದ್ರಾಕ್ಷಿ ತೋಟ ತೆಗೆದುಕೊಂಡರೆ ಒಂದೂಕಾಲು ಎಕರೆಗೆ ವಿನಾಯಿತಿ ಇದೆ. ಈ ದ್ರಾಕ್ಷಿತೋಟ ಇರುವವರೂ ಕೂಡ ಸಾಹುಕಾರರಾಗಿದ್ದಾರೆ. ಮಾನ್ಯ ಬೈರೇಗೌಡರು ಹೇಳಿದಂತೆ ಒಂದು ಎಕರೆ ಇರುವವರಿಗೂ ಕೂಡ ಕನಿಷ್ಟ ೬-೭ ಸಾವಿರ ರೂಪಾಯಿ ಸಿಕ್ಕುತ್ತದೆ. ಹಾಗೆಯೇ ಅಡಿಕೆ ತೋಟ ಇರುವವರಿಗೂ ಕೂಡ ಕನಿಷ್ಟ ೪ ಸಾವಿರ ರೂಪಾಯಿ ಸಿಕ್ಕುತ್ತದೆ. ಇಂಥ ಆದಾಯ ಬರತಕ್ಕಂಥ ಒಂದು ವರ್ಗದ ಜನರು ಏನಿದ್ದಾರೆ ಅವರಿಗೆ ಇನ್ನೂ ಪ್ರೋತ್ಸಾಹ ಕೊಡಬೇಕು ಎನ್ನತಕ್ಕ ಕಲ್ಪನೆಯನ್ನು ಏನು ಇಟ್ಟುಕೊಂಡಿದ್ದಾರೆ ಇದನ್ನು ಸಮತೋಲನ ಮಾಡಬೇಕೆಂದು ನನ್ನ ಒತ್ತಾಯ. ಹಿಂದೆ ಅಗ್ರಿಕಲ್ಚರಲ್ ಡೆಟರ್ಸ್ ರಿಲೀಫ್ ಆಕ್ಟ್ ಜಾರಿಯಲ್ಲಿತ್ತು. ವಾರ್ಷಿಕ ಉತ್ಪತ್ತಿ ೧೨೦೦ ರೂಪಾಯಿ ಇರುವವರು ಕಾನೂನಿಂದ ಪ್ರಯೋಜನ ಪಡೆಯುವುದಕ್ಕೆ ಅರ್ಹರಾಗಿದ್ದರು, ಆದರೆ ಇವತ್ತು ಅದಕ್ಕಿಂತಲೂ ಮುಂದೆ ಹೋಗಿದ್ದಾರೆ. ಇವತ್ತು ಬಡವರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವ ಉದ್ದೇಶ ಇರುವುದರಿಂದ ಜಮೀನು, ಮನೆ ಇಲ್ಲದೇ ಇರುವಂಥವನಿಗೂ ಕೂಡ ಆತನ ದಿನನಿತ್ಯದ ದುಡಿಮೆಯ ಆಧಾರದ ಮೇಲೆ ಗುರುತು ಹಚ್ಚಬೇಕು. ಇದನೆಲ್ಲಾ ಗಣನೆಗೆ ತೆಗೆದುಕೊಂಡು ಭೂಮಿ ಹೊಂದಿರತಕ್ಕವರು ಪ್ರಯೋಜನ ಪಡೆಯುವ ರೀತಿಯಲ್ಲಿಯೇ ಕೆಲವೊಂದು ಮಾರ್ಪಾಡುಗಳನ್ನು ಮಾಡಬೇಕೆಂದು ಕೇಳಿಕೊಂಡು ಈ ವಿಧೇಯಕವನ್ನು ತಂದಿರತಕ್ಕ ಸಚಿವರಿಗೆ ಹಾಗೂ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

3-30. P M.

† ಶ್ರೀ ಬಿ ವಿ. ಕಕ್ಕಿಲಾಯ.—(ಬಂಟವಾಳ) ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಮಸೂದೆಯನ್ನು ಬಹಳ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದು ನಮ್ಮ ರಾಜ್ಯದಲ್ಲಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ವಾಸಮಾಡುವಂತಹ ಅನೇಕಮಂದಿ ಬಡಜನರಿಗೆ ಸಹಾಯಕರವಾಗಿದೆ ಅವರನ್ನು ಋಣ ಬಾಧೆಯಿಂದ ಮುಕ್ತಗೊಳಿಸುವ ಮಸೂದೆಯಾಗಿದೆ ಇದು ಆದುದರಿಂದ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುವುದರೊಂದಿಗೆ ಇದನ್ನು ಕಾರ್ಯಗತಗೊಳಿಸುವಂತೆ ಎಲ್ಲ ಪ್ರಯತ್ನದಲ್ಲಿಯೂ ಕೂಡ ನಮ್ಮ ಸಹಕಾರ ಸರ್ಕಾರಕ್ಕೆ ಇದೆ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀ ಕಾಗೋಡು ತಿಮ್ಮಪ್ಪನವರು ಈಗಾಗಲೇ ಹೇಳಿದಹಾಗೆ ಕೇವಲ ಬಡವರಷ್ಟೇ ಅಲ್ಲ ಸ್ವಲ್ಪ ಬೇರೆ ಕೆಲವು ಜನರಿಗೂ ಕೂಡ ಇದನ್ನು ವಿಸ್ತರಿಸಬೇಕು ಅವರು ಅಂಕಿಸಂಖ್ಯೆಗಳನ್ನು ಕೊಟ್ಟು ವಿಸ್ತಾರವಾಗಿ ಹೇಳಿರುತ್ತಾರೆ. ಅವರ ವಾದಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನೂ ಕೂಡ ವ್ಯಕ್ತಪಡಿಸುತ್ತೇನೆ. ಇವರಲ್ಲಿ ಕಲಂ ೩ರಲ್ಲಿ ಯಾವ ವಿಭಾಗದ ರೈತಾಪಿ ಜನರಿಗೆ ಇದರ ಪ್ರಯೋಜನ ಸಿಕ್ಕುತ್ತದೆಂದು ವಿವರಿದ್ದಾರೆ. ಅದರಲ್ಲಿ ಎರಡು ಹೆಕ್ಟೇರು ನೀರಾವರಿಯಿಲ್ಲದ ಖುಷ್ಕಿ ಜಮೀನು ಅಥವ ಅದಕ್ಕೆ ಸಮನಾದ ಬೇರೆ ಜಮೀನು ಇರುವವರು ಹೇರತು ಹೆಚ್ಚು ಇರುವವರು ಈ ಮಸೂದೆಗೆ ಒಳಪಡುವುದಿಲ್ಲ. ಅದರ ಬಗ್ಗೆ ಈಗಾಗಲೇ ಕಾರಣಕೊಟ್ಟು ಹೇಳಿರುವರು. ೨ ಹೆಕ್ಟೇರು ನೀರಾವರಿ ಇಲ್ಲದಂತ ಜಮೀನು ಇರುವವರ ವರಮಾನ ಮತ್ತು ಮಸೂದೆಯಲ್ಲಿ ಸೂಚಿಸಿರುವಹಾಗೆ ಕಾಲು ಹೆಕ್ಟೇರು ಶಾಶ್ವತವಾಗಿ ನೀರಾವರಿ ಇರತಕ್ಕಂಥ ಪ್ರದೇಶ ಅಂಥ ನೀರಾವರಿಯಿಂದ ಬರುವಂತ ಬೆಳೆಯನ್ನು ಬೆಳೆಸುವ ಜಮೀನು ಈ ಎರಡರಲ್ಲೂ ಉತ್ಪಾದನೆಯಲ್ಲಿ ಎಷ್ಟು ವ್ಯತ್ಯಾಸವಿದೆ ಎನ್ನುವುದನ್ನು ಶ್ರೀ ಕಾಗೋಡು ತಿಮ್ಮಪ್ಪನವರು ಅಂಕಿ ಸಂಖ್ಯೆ

ಗಳಿಂದ ಹೇಳಿರುತ್ತಾರೆ. ನಾನಾದರೂ ಹೇಳುತ್ತೇನೆ ಏನೆಂದರೆ ಋಣ ಪರಿಹಾರದ ಸೌಲಭ್ಯವನ್ನು ಇನ್ನೂ ಸ್ವಲ್ಪಮಟ್ಟಿಗೆ ವಿಸ್ತರಿಸಬೇಕೆಂದು. ಎರಡು ಹೆಕ್ಟೇರ್‌ನಿಂದ ಎರಡೂವರೆ ಹೆಕ್ಟೇರಿಗಾದರೂ ಅದನ್ನು ಏರಿಸಬೇಕು. ಹಾಗೆ ಮಾಡಿದರೆ ಇನ್ನೂ ಹೆಚ್ಚಿನ ಜನರಿಗೆ ಸಮತೋಲನದಲ್ಲಿ ಇದರಿಂದ ಪ್ರಯೋಜನವಾಗುತ್ತದೆ ಎಂದು ನನಗನಿಸುತ್ತದೆ. ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನು ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿಯೂ ಕೂಡ ಒಂದು ವರ್ಷದಲ್ಲಿ ೨,೪೦೦ ರೂಪಾಯಿ ವರಮಾನ ಇರತಕ್ಕಂಥವರು ಮಾತ್ರ ಈ ಮಸೂದೆಯ ಶಿಕ್ಷೆಗೆ ಒಳಪಡುತ್ತಾರೆ ತಮಗೆ ಗೊತ್ತಿರುವಹಾಗೆ ಮುನಿಸಿಪಾಲಿಟಿಗಳಲ್ಲಿ ಬಾಂಗಿ ಕೆಲಸ ಮಾಡತಕ್ಕವರೂ ಕೂಡ ಸರಕಾರದಿಂದ ನಿಗದಿಯಾದ ವೇತನ ಮತ್ತು ಭತ್ಯಗಳನ್ನು ಪಡೆಯುವ ಅವರೂ ಕೂಡ ಈ ಹೊತ್ತು ಸಾಮಾನ್ಯವಾಗಿ ೩ ನೂರು ರೂಪಾಯಿಗಳಷ್ಟು ವರಮಾನವನ್ನು ತಿಂಗಳಿಗೆ ಪಡೆಯುತ್ತಾರೆ. ಸಮಾನ್ಯವಾಗಿ ಸರ್ಕಾರಿ ನೌಕರರು, ಖಾಸಗಿ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕವರು ಕೂಡ ಮುನ್ನೂರು ರೂಪಾಯಿಗಳಷ್ಟು ಕನಿಷ್ಟ ವೇತನವನ್ನು ಪಡೆಯುತ್ತಿದ್ದಾರೆ. ಅದಕ್ಕಿಂತ ಕಡಿಮೆ ವೇತನವನ್ನು ಪಡೆದರೆ ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಅವರು ಜೀವನಮಾಡುವುದಕ್ಕೆ ಸಾಧ್ಯವೇ ಇಲ್ಲ ನನ್ನ ವಿನಂತಿ ಏನೆಂದರೆ ಪಟ್ಟಣದಲ್ಲಿ ವಾಸಮಾಡತಕ್ಕ ಜನರಿಗೆ ೨೪೦೦ ರೂಪಾಯಿನಿಂದ ೩,೬೦೦ ರೂಪಾಯಿಗಳ ವಾರ್ಷಿಕ ವರಮಾನಕ್ಕೆ ಮಸೂದೆಯ ಸೌಲಭ್ಯವನ್ನು ಏರಿಸಿದರೆ ಸಾಮಾನ್ಯ ಬಡತನರೇಖೆ ಯಿಂದ ಕೆಳಗೆ ಇದ್ದು ತಮ್ಮ ಪ್ರತಿಯೊಂದು ಕಷ್ಟಕ್ಕೂಕೂಡ ಸಾಲದ ಹಣವನ್ನೆ ಯಾರು ಅವಲಂಬಿಸಿ ಕೊಂಡಿರುತ್ತಾರೋ ಅಂಥಹ ಜನರನ್ನು ಋಣಬಾಧೆಯಿಂದ ವಿಮುಕ್ತಮಾಡಿದಂತಾಗುತ್ತದೆ,

ಇನ್ನು ಕಲಂ ೮ರಲ್ಲಿ (a) Any rent due in respect of any pr)pesty let out to such debtor''. ಎಂದು ಇದೆ. ಭೂಮಿಯನ್ನಾಗಲೀ ಮನೆಯನ್ನಾಗಲೀ ಗೇಣಿಗೋ, ಬಾಡಿಗೆಗೋ ವಹಿಸಿಕೊಂಡವರು ಗೇಣಿ ಅಥವ ಬಾಡಿಗೆ ತರಲು ಬಾಕಿಯಿದ್ದರೆ. ಅಂಥವರಿಗೆ ಇದು ಅನ್ವಯಿಸುವುದಿಲ್ಲ. ಅವರು ಕೊಡಬೇಕಾದ ಗೇಣಿ ಅಥವಾ ಬಾಡಿಗೆ ಬಾಕಿ ಇದ್ದರೆ ಅಂಥವರಿಗೆ ಈ ಶಾಸನ ಅನ್ವಯಿಸುವುದಿಲ್ಲವೆಂದು ಹೇಳಿದರೆ ಇದರಲ್ಲಿ ಒಂದು ವಿಷಯವನ್ನು ವ್ಯಕ್ತಪಡಿಸಬೇಕಾಗಿದೆ. ಅಧ್ಯಕ್ಷರೆ ಶ್ರೀ ಕಾಗೋಡು ತಿಮ್ಮಪ್ಪನವರು ಈ ಬಗ್ಗೆ ಹೇಳಿದರು ಇತ್ತೀಚೆಗೆ ಹೈಕೋರ್ಟಿನ ಒಂದು ತೀರ್ಮಾನ ಕೂಡ ಇದರ ಬಗ್ಗೆ ಬಂದಿರುವುದನ್ನು ಗಮನಿಸಬಹುದು. ಭೂ ಸುಧಾರಣೆ ಶಾಸನ ಮಾಡಿದಾಗ ಭೂ ಕಂದಾಯದ ಹತ್ತರಷ್ಟು ಗೇಣಿ ಕೊಡಬೇಕೆಂದು ನಿಗದಿ ಮಾಡಿದ್ದರೆ. ೧೯೫೪ರ ಮಾರ್ಚಿ ೧ನೇ ತಾರೀಕಿಗಿಂತ ಹಿಂದಿನ ಗೇಣಿ ಕೊಡತಕ್ಕಂಥದ್ದು ಕಂಟ್ರಾಕ್ಟ್ ದರ ಏನು ಇತ್ತು ಅಥವ ಹಿಂದಿನ ಕಾನೂನುಗಳಲ್ಲಿ ಯಾವರೀತಿ ಐದನೆ ಒಂದುಭಾಗವೋ ನಾಲ್ಕನೇ ಒಂದು ಭಾಗವೋ ಗೇಣಿ ನಿಗಧಿ ಮಾಡಿದ್ದಾರೋ ಆರೀತಿ ಕೊಡಬೇಕಾಗುತ್ತದೆ ಎಂಬುದಾಗಿ ಡಿಕ್ರಿ ಆಗಿರುವಲ್ಲಿ ಹಾಗೆಯೇ ಕೊಡಬೇಕು ಎಂದು ಹೈಕೋರ್ಟ್ ಇತ್ತೀಚೆಗೆ ತೀರ್ಮಾನ ಕೂಡ ಕೊಟ್ಟಿದೆ. ಆರೀತಿ ಗೇಣಿ ಬಾಕಿ ಇರುವುದನ್ನು ಲೆಕ್ಕ ಹಾಕುವಂತೆ ತಹಸೀಲ್‌ದಾರ ಆದೇಶ ಹೋಗಿದೆ. ಇದರಿಂದ ರೈತರಿಗೆ ಬಹಳ ದೊಡ್ಡ ಹೊರೆಯಾಗುತ್ತದೆ. ಭೂಸುಧಾರಣೆ ಕಾನೂನಿನಲ್ಲಿ ಹೇಳಿರುವಂತೆ ಕಂದಾಯದ ೧೦ ಪಟ್ಟು ಹಿಂದಿನ ಬಾಕಿಯನ್ನು ದರದಲ್ಲಿ ವಸೂಲಿಯನ್ನು ಮಾಡಬಹುದು. ಗೇಣಿ ಬಾಕಿ ಇರುವುದನ್ನು ಹೀಗೆ ಇಳಿಸುವುದಕ್ಕೆ ಕಾನೂನಿನ ರಕ್ಷಣೆ ಅವರಿಗೆ ಸಿಗಬೇಕು. ಬಾಕಿಯಾದ ಗೇಣಿ ಸಾಲದ ಹೊರೆಯಾಗಿ ಅವರ ಮೇಲೆ ಕುಳಿತಿರುವಾಗ ಜಮೀನಿನಲ್ಲಿ ಬೆಳೆಯುವುದಕ್ಕಿಂತ ಹೆಚ್ಚಿಗೆ ಪಾವತಿ ಮಾಡಬೇಕಾದ ಪರಿಸ್ಥಿತಿ ಬರುವಾಗ ಅಂಥವರಿಗೆ ಇದರ ರಕ್ಷಣೆ ಸಿಗಬೇಕು.

ಇನ್ನೊಂದು ವರ್ಗದವರು ಕಾನೂನಿನ ವ್ಯಾಪ್ತಿಯೊಳಗೆ ಬರಬೇಕು ಚಿಕ್ಕ ಚಿಕ್ಕ ಬಾಡಿಗೆ ಮನೆಗಳಲ್ಲಿ ವಾಸಮಾಡುವವರು, ಕಳೆದ ಕೆಲವು ವರ್ಷಗಳಿಂದ ಅವರೂ ಕೂಡ ಹೆಚ್ಚಿನ ಬಾಡಿಗೆಯನ್ನು ಕೊಡಬೇಕಾದ ಪರಿಸ್ಥಿತಿ ಬಂದಿದೆ. ಬಾಡಿಗೆಯೂ ಕೂಡ ಬಾಕಿ ನಿಂತಿರುತ್ತದೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಬ್ಬರು ಬಾಡಿಗೆದಾರರು ಇದ್ದಂಥ ಮನೆಯನ್ನು ಬಿಟ್ಟು ಹೋದರೆ, ಅವರು ಬಿಟ್ಟು ಹೊಗುವಾಗ ಬಾಡಿಗೆಯನ್ನು ಕೊಡದೆ ಹೋದರೆ ಅದೇ ಮನೆಗೆ ಮತ್ತೊಬ್ಬರು ಬಂದು ಕೂತುಕೊಂಡರೆ ಈವತ್ತು ಹೊಸದಾಗಿ ಬಂದಂಥ ಬಾಡಿಗೆದಾರನ ಮೇಲೆ ಕೋರ್ಟ್‌ನಲ್ಲಿ ದಾವೆಮಾಡಿ ಡಿಕ್ರಿ ಪಡೆದು ಅವರ ಮನೆ ಪಾತ್ರೆಗಳನ್ನು ಜಪ್ತಿ ಮಾಡಿಕೊಂಡು ಹೋಗಿದ್ದಾರೆ. ಇಂಥ ನಿದರ್ಶನಗಳನ್ನು ಬೇಕಾದಷ್ಟು ಕೊಡಬಲ್ಲೆ. ಆದ್ದರಿಂದ ೩,೬೦೦ ರೂಗಳಿಗಿಂತ ಕಡಿಮೆ ವರಮಾನ ಇರುವಂತ ಜನಗಳಿಗೆ ಗೇಣಿ ಅಥವಾ ಬಾಡಿಗೆ ಬಾಕಿಯ ಹೊರೆ ಹೊತ್ತಿರುವವರಿಗೆ ಕಾನೂನಿನ ಪ್ರಯೋಜನ ಲಭಿಸಬೇಕು. ಕೊನೆಯದಾಗಿ ಇರುವ ಸಾಲವನ್ನು ರದ್ದುಮಾಡುವಾಗ ಸಾಲ ದೊರಕ್ಕಿಸುವ ಸಾಧ್ಯತೆಯ ಕಡೆಗೆ ಗಮನ

ಕೊಡಬೇಕು ಎಷ್ಟೋ ಮಂದಿಗೆ ಸಾಲ ಒದಗಿಸುವ ಬೇರೆ ಮಾರ್ಗ ಇಲ್ಲದೇಹೋದರೆ ಅದರಿಂದ ಹೆಚ್ಚಿನ ಪ್ರಯೋಜನ ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಇತ್ತೀಚೆಗೆ ನಾನು ತಿಳಿದ ಹಾಗೆ ಕೇರಳದಲ್ಲಿ ಒಂದು ಕೋಟಿ ರೂಪಾಯಿಗಳವರೆಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಸಹಕಾರಿ ಸಂಘಸಂಸ್ಥೆಗಳು ಡಿಪಾಸಿಟ್ ರೂಪದಲ್ಲಿ ಪಡೆದುಕೊಂಡು ರಿಸರ್ವ್ ಬ್ಯಾಂಕಿನವರ ಒಪ್ಪಿಗೆ ಇಲ್ಲದೆಯು ತಮ್ಮ ಸ್ವಂತ ಹಣವನ್ನು ಬಡಜನರಿಗೆ ಯಾದ ಜನಕ್ಕೆ ಸಾಲವಾಗಿ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಯೋಜನೆ ಹಾಕಿ ಕೊಂಡಿದ್ದಾರೆ ಇದು ಎಷ್ಟರಮಟ್ಟಿಗೆ ನಮ್ಮ ರಾಜ್ಯದಲ್ಲಿ ಸಹಾಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಡಿಫರೆನ್ಸಿಯಲ್ ರೇಟ್ ಆಫ್ ಇಂಟರೆಸ್ಟ್ ೬$\frac{1}{4}$ ಪರ್ಸೆಂಟ್ ನಂತೆಯಾದರೂ ಜನಗಳಿಗೆ ಸಾಲವನ್ನು ಕೊಡುವ ವ್ಯವಸ್ಥೆಯನ್ನು ಸಹಕಾರಿ ಇಲಾಖೆಗಳವರು ರೂಪಿಸಿ ಅದಕ್ಕೆ ಆವಶ್ಯಕತೆ ಇದ್ದರೆ ರಿಸರ್ವ್‌ಬ್ಯಾಂಕಿನಿಂದಲೂ ಕೇಂದ್ರ ಸರ್ಕಾರದಿಂದಲೂ ಮಂಜೂರಾತಿಯನ್ನು ಪಡೆದುಕೊಂಡು ಸಂಪನ್ ಮೂಲಗಳನ್ನು ನಮ್ಮ ರಾಜ್ಯದಲ್ಲಿ ಒದಗಿಸುವ ಹಾಗೆ ಯೋಜನೆಯನ್ನು ರೂಪಿಸುವ ಕಾರ್ಯಕ್ರಮವನ್ನು ತರಬೇಕು. ಈವತ್ತು ಬಡಜನರು ಸಾಲ ಪಡೆದುಕೊಂಡದ್ದನ್ನು ವಾಪಸ್ ಕೊಡುತ್ತಾರೆ. ಕೊಡದಿದ್ದರೆ ಮುಂದಕ್ಕೆ ಅವರಿಗೆ ಸಾಲ ಸಿಕ್ಕುವುದಿಲ್ಲ ಸಹಕಾರಸಂಘಗಳಲ್ಲೇ ಪಟ್ಟಭದ್ರವಾಗಿ ಕುಳಿತಂಥ ಜನ ಸಾಲ ತೆಗೆದುಕೊಂಡು ವಾಪಸ್ ಕೊಡದೆ ಸಂಘವನ್ನು ಮುಳುಗಿಸಿದ್ದು ಆಗಿದೆ. ಸಹಕಾರಸಂಘಗಳಲ್ಲಿ ಸಾಲದ ೬೦ ಶೇಕಡ ವಸೂಲಿ ಕೊಡದಿದ್ದರೆ ಬೇರೆ ಜನಗಳಿಗೆ ಸಾಲ ಕೊಡುವುದಕ್ಕೆ ಆಗುವುದಿಲ್ಲ. ಅವರಿಗೆ ಸಾಲ ಸಿಕ್ಕುವುದಿಲ್ಲ. ಪಟ್ಟಭದ್ರಹಿತಾಸಕ್ತಿಗಳಾದ ಇವರು ಸಂಘವನ್ನು ಮುಳುಗಿಸಿ ಹೊರಟು ಹೋದರು. ಇದರಿಂದ ಬಹುಸಂಖ್ಯಾತ ಜನರಿಗೆ ಸಾಲ ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಬಂದಿದೆ. ಇಂತಹ ವ್ಯಕ್ತಿಗಳಿಂದ ಅಂದರೆ ಇವತ್ತು ಯಾರು ಸಹಕಾರಸಂಘಗಳಲ್ಲಿ ಪಟ್ಟಭದ್ರವಾಗಿ ನಿಂತು ಸಂಘವನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡು ಕೊಡಬೇಕಾದ ಹಣವನ್ನು ಕೊಡದೆ ಸಂಘಗಳು ಸ್ಥಗಿತಗೊಳಿಸುವ ಹಾಗೆ ಮಾಡುತ್ತಾ ಇರುವಂತಹವರನ್ನು ನಿರ್ದಾಕ್ಷಿಣ್ಯವಾಗಿ ಅದರಿಂದ ದೂರ ಮಾಡಿ ಸಹಕಾರ ಸಂಘಗಳು ಜೀವಂತವಾಗಿ ಉಳಿಯುವಂತೆ ಮಾಡಿ ಬಡಜನರಿಗೆ ಬೇಕಾದಂತ ಸಹಾಯ ಮಾಡಲು ಒಂದು ಶಕ್ತಿಯನ್ನು ಈ ಸಹಕಾರ ಸಂಘಗಳಿಗೆ ಕೊಡುವ ಹಾಗೆ ಇದನ್ನು ಪುನರ್ರಚನೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ಈ ಮಸೂದೆಯನ್ನು ತಂದದ್ದಕ್ಕಾಗಿ ತಮ್ಮನ್ನು ಮತ್ತು ಸರ್ಕಾರದವರನ್ನೂ ಅಭಿನಂದಿಸಿ ಮತು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(Mr Deputy Speaker in Chair)

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಉಪಾಧ್ಯಕ್ಷರೆ, ಈ ವಿಧೇಯಕದ ಬಗ್ಗೆ ಕೆಲವು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಮೊದಲನೆಯದಾಗಿ ಈ ವಿಧೇಯಕ ದಿಂದ ಸಾಮಾನ್ಯ ಜನರಿಗೆ ಒಳ್ಳೆಯದೂ ಆಗಿದೆ, ಕೆಟ್ಟದ್ದೂ ಆಗಿದೆ ಎಂದು ನನ್ನ ಭಾವನೆ. ಈಗ ಲೇವಾದೇವಿ ಮಾಡುತ್ತಿರುವವರು ಶ್ರೀಮಂತರೇ ಅಲ್ಲ. ಈ ಲೇವಾದೇವಿ ಮಾಡುತ್ತಿರುವವರು ಬರೇ ಶ್ರೀಮಂತರು ಎಂಬ ಭಾವನೆ ತಪ್ಪು. ಅನೇಕ ಜನ ಬಡವರೂ ಅಲ್ಪಸ್ವಲ್ಪ ಹಣ ಇದ್ದವರು, ಉತ್ಪತ್ತಿ ಇದ್ದವರೂ ಇದನ್ನು ಮಾಡುತ್ತಿದ್ದರು. ಅಂತಹವರಿಗೂ ಕೂಡ ಈ ವಿಧೇಯಕದಿಂದ ತೊಂದರೆಯಾಗಿದೆ. ಇದರಲ್ಲಿ ಒಳ್ಳೆಯದು ಜಾಸ್ತಿಯಾಗಿದೆ, ಕೆಟ್ಟದ್ದು ಕಡಿಮೆಯಾಗಿದೆ. ನಿಜ ವಾಗಿ ಈ ಋಣಪರಿಹಾರ ಕಾಯಿದೆ ಜಾರಿಗೆ ಬಂದಾಗ ಬಡವರು ಲೇವಾದೇವಿ ಮಾಡಿದಪಕ್ಷಕ್ಕೆ ಸರ್ಕಾರದವರು ಒಂದು ಪರಿಹಾರ ಸೂಚಿಸದಿದ್ದರೂ ಅವರು ಬದುಕುತ್ತಿದ್ದರು ಎಂಬುದು ನನ್ನ ಅಭಿಪ್ರಾಯ. ಇನ್ನು ಎರಡನೆಯದು ಏನೆಂದರೆ ಈ ವಿಧೇಯಕದಲ್ಲೇ ಏನಾಗಿದೆ ಎಂದರೆ ಸಾಲ ತೆಗೆದುಕೊಂಡಿದ್ದು ವಜಾ ಆಗಿದೆ, ಲೇವಾದೇವಿಯೂ ವಜಾ ಆಗಿದೆ ಎಂದು ಮಂತ್ರಿಯವರು ಹೇಳಿದ್ದಾರೆ. ಈ ಮಸೂದೆಯ ಪ್ರಕಾರ ಇನ್ನು ಮುಂದೆ ಬಡವರು ಸಾಲ ಬೇಕಾದವರು ಏನು ಮಾಡಬೇಕು ಎನ್ನುವುದನ್ನು ಸ್ಪಷ್ಟವಾಗಿ ಹೇಳಿಲ್ಲ. ಅವರಿಗೆ ಸಾಲ ಬೇಕಾದರೆ ಏನು ಮಾಡಬೇಕು? ಸಹಕಾರ ಸಂಘಗಳ ಮುಖಾಂತರ ತೆಗೆದುಕೊಳ್ಳಬೇಕೇ, ಬ್ಯಾಂಕ್‌ಗಳ ಮೂಲಕ ತೆಗೆದುಕೊಳ್ಳಬೇಕೇ ಎನ್ನುವುದರ ಬಗ್ಗೆ ಸ್ಪಷ್ಟ ಪರಿಹಾರವನ್ನು ಸೂಚಿಸಿಲ್ಲ. ಇವತ್ತು ಇದು ಒಳ್ಳೆಯದಾಗಿ ಕಂಡರೂ ಕೂಡ ಜನಗಳು ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾರೆ. ಅನೇಕಸಾರಿ ರಾಜ್ಯಪಾಲರ ಭಾಷಣದ ಮೇಲೆ ನಾವು ಮಾತನಾಡಿದ್ದೇವೆ. ಎಲ್ಲಾ ಕೂಡ ಸಾಲ ಹುಟ್ಟುತ್ತಾ ಇಲ್ಲ. ಚಿನ್ನವನ್ನ ತೆಗೆದುಕೊಂಡು ಹೋದರೂ ಕೂಡ ಸಾಲ ಹುಟ್ಟುತ್ತಾ ಇಲ್ಲ. ಸರ್ಕಾರದವರು ಇದನ್ನು ತೀವ್ರವಾಗಿ ಪರಿಶೀಲಿಸಿ ಅದಷ್ಟು ಬೇಗ ಸಹಕಾರಸಂಘಗಳು ಮತ್ತು ಬ್ಯಾಂಕುಗಳಿಗೆ ಇನ್‌ಸ್ಟ್ರಕ್ಷನ್ ಕೊಟ್ಟು ಬಡ ಜನಗಳಿಗೆ

ಸಹಾಯ ಹುಟ್ಟುವ ಹಾಗೆ ಮಾಡದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಬ್ಯಾಂಕ್ ರಾಷ್ಟ್ರೀಕರಣವಾದದ್ದು ಒಳ್ಳೆಯದಾಗಿದೆ, ಆದರಿಂದ ತಪ್ಪಾಗಿದೆ ಎಂದು ನಾನು ಹೇಳುವುದಿಲ್ಲ. ಅದರೆ ಹಳೆಯ ಪದ್ಧತಿ ಇನ್ನೂ ಹೋಗಲಿಲ್ಲ. ಬಡವರು ಅಲ್ಲಿಗೆ ಹೋದರೆ ಬ್ಯಾಂಕಿನವರು ಸಹಿಸುವುದಿಲ್ಲ; ಏನು ಆಸ್ತಿ ಇದೆ, ಜಮೀನು ಕೊಡುತ್ತಾರೆಯೇ, ಸಂಬಳ ಬರುತ್ತಿದೆಯೇ ಎಂದು ಕೇಳುತ್ತಾರೆ. ಈ ಮಸೂದೆ ಬಂದಮೇಲೆ ಪ್ರೈವೈಟ್ ಪಾರ್ಟೀಸ್‌ಗಳಿಂದ ಹಣ ಸಿಕ್ಕುತ್ತಾ ಇಲ್ಲ, ಬ್ಯಾಂಕಗಳಿಂದಲೂ ಹಣ ಸಿಕ್ಕುವುದಿಲ್ಲ. ಅದಕ್ಕೆ ಏನು ಪರಿಹಾರವನ್ನು ಸೂಚಿಸುತ್ತಾರೆ ಎಂಬುದನ್ನು ಸರ್ಕಾರದವರು ಸ್ಪಷ್ಟಪಡಿಸಬೇಕಾಗಿದೆ ಎಂದು ಹೇಳುತ್ತೇನೆ. ಈ ಸಹಕಾರಸಂಘಗಳನ್ನು ಮಾನ್ಯಮಂತ್ರಿಯವರು ಇಂಪ್ರೂವ್ ಮಾಡುವುದಕ್ಕೆ ಹೊರಟಿದ್ದಾರೆ. ಅದರ ಕಥೆ ನೋಡಿದರೆ ವ್ಯಸನವಾಗುತ್ತದೆ. ಸಹಕಾರ ಸಂಘಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಸೇರಿ ಕೊಂಡು ಕೋಟ್ಯಾಂತರ ರೂಪಾಯಿಗಳ ಹಣವನ್ನು ಅರಗಿಸಿಕೊಂಡಿದ್ದಾರೆ: ಸರ್ಕಾರದವರು ಈ ಸಹಕಾರಸಂಘಗಳನ್ನು ಇಂಪ್ರೂವ್ ಮಾಡದಿದ್ದರೆ ತೊಂದರೆಯಾಗುತ್ತದೆ. ಅಲ್ಲಿರತಕ್ಕ ಪಟ್ಟಭದ್ರ ಹಿತಾಸಕ್ತಿಗಳನ್ನು ಬಲಿ ಹಾಕದಿದ್ದರೆ ಈ ಮಸೂದೆಗೆ ಬೆಲೆ ಇಲ್ಲದಹಾಗೆ ಆಗುತ್ತದೆಂದು ವಿಶಾದದಿಂದ ಹೇಳ ಬಯಸುತ್ತೇನೆ. 2400 ರೂಪಾಯಿಗಳ ಉತ್ಪತ್ತಿ ಬರುವವರಿಗೂ ಎಗ್ಸ್‌ಂಪ್ಷನ್ ಕೊಟ್ಟಿದ್ದಾರೆ. ಈ ಲೇವಾದೇವಿಯನ್ನು ಪೂರ್ಣವಾಗಿ ನಿಲ್ಲಿಸಿಬಿಟ್ಟರೆ ಒಳ್ಳೆಯದು. ಏನು ಕಾರ್ಯ ನಡೆಯಬೇಕಾದರೂ ಕೂಡ ಸಹಕಾರಸಂಘಗಳ, ಬ್ಯಾಂಕುಗಳ ಮುಖಾಂತರ ನಡೆಯಲಿ; ಎಷ್ಟೇ ಹಣ ಇದ್ದರೂ ಕೂಡ ಪ್ರೈವೈಟ್ ಎಂಟರ್‌ಪ್ರೈಸಸ್‌ಗಳನ್ನು ಹೋಗಲಾಡಿಸಿ ಬ್ಯಾಂಕುಗಳಲ್ಲಿ ಹಣವನ್ನು ಇಡಲಿ ಬ್ಯಾಂಕುಗಳಿಗೆ ಬಡವರು ಹೋದರೆ, ಸಾಲವನ್ನು ತೆಗೆದುಕೊಂಡರೆ ಅವರಿಗೆ ಒಳ್ಳೆಯದಾಗುತ್ತದೆ. ಈ ಪ್ರೈವೇಟ್ ಲೇವಾದೇವಿಯನ್ನು ಅಬಾಲಿಷ್ ವಜಾಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ನಿಜವಾಗಿಯೂ ಕೂಡ ಈ ಮಸೂದೆಯಿಂದ ಅನೇಕ ಜನರಿಗೆ ಅನುಕೂಲವಾಗಿದೆಯೆಂದು ಹೇಳುತ್ತೇನೆ. ನಾವು ಇವತ್ತು ನೋಡುತ್ತಿದ್ದೇವೆ ನೂರಾರು ರೂಪಾಯಿಗಳಿಗೆ 10-20 ರೂಪಾಯಿಗಳ ಬಡ್ಡಿಯನ್ನು ತೆಗೆದುಕೊಳ್ಳುವ ನಿದರ್ಶನಗಳು ಇವೆ. ಕೇವಲ 50 ರೂಪಾಯಿಗಳಿಗೆ 100 ರೂಪಾಯಿಗಳ ಪತ್ರವನ್ನು ಕೊಡುತ್ತಾರೆ. ಅನೇಕ ಜನ ಬಡವರು ಅವರ ಕಷ್ಟದಲ್ಲಿ ಹಣ ಇಲ್ಲದೇ ಇದ್ದಾಗ ಸಾಲ ಮಾಡಿ ಸುಗ್ಗಿ ಕಾಲದಲ್ಲಿ ಬಂದ ಬತ್ತವನ್ನು ಲೇವಾದೇವಿ ಮಾಡುವವರಿಗೆ ಅಳದಿರುವುದನ್ನು ನೋಡಿದ್ದೇನೆ. ಆದ್ದರಿಂದ ಈ ಮಸೂದೆಯಿಂದ ನಿಜವಾಗಿಯೂ ಕೂಡ ಒಳ್ಳೆಯದಾಗಿದೆ. ಅದರೆ ಈಗ ಅನೇಕ ಜನರಿಗೆ ಸಾಲ ಹುಟ್ಟದೇ ಇರುವುದರಿಂದ ಅನೇಕ ಜನರಿಗೆ ತೊಂದರೆಯಾಗಿದೆ. ಆದೂ ಅಲ್ಲದೆ ಅನೇಕ ಜನ ಬಡವರಿಗೆ ಲೇವಾದೇವಿ ಕೊಟ್ಟು ಸಿಕ್ಕಿಹಾಕಿಕೊಂಡಿದ್ದಾರೆ. ಅವರಿಗೂ ಪರಿಹಾರ ಸೂಚಿಸಿ ಹಳ್ಳಿಗಾಡಿನ ಜನರಿಗೆ, ರೈತರಿಗೆ 2400ರೂಗಿಂತ ಕಡಿಮೆ ವರಮಾನ ಇರತಕ್ಕಂಥವರಿಗೆ ಸಾಲ ಸಿಕ್ಕುವ ಹಾಗೆ ಸರ್ಕಾರದವರು ಮಾಡುತಲ್ತರೆಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪ್ರಭಾಕರ (ವರ್ತೂರ್).—ಮಾನ್ಯಅಧ್ಯಕ್ಷರೇ, ಈ ಋಣ ವಿಮುಕ್ತಿಗೆ ಸಂಬಂಧಪಟ್ಟ ಕಾನೂನು ಬಹು ದಿವಸಗಳಿಂದಲೂ ನೊಂದ ಜನಗಳಿಗೆ ಅದರಲ್ಲೂ ಬಡವರಿಗೆ ಇದೊಂದು ಕನಸಾಗಿತ್ತು. ಇದರಲ್ಲಿ ಲೇವಾದೇವಿಗೆ ಕೊಟ್ಟಿರತಕ್ಕಂಥ ಜನ ಏನು ಅಭಿಪ್ರಾಯ ಪಡುತ್ತಾರೆ ಎನ್ನತಕ್ಕಂಥಾದ್ದು ನಮಗೆ ಪ್ರಾಮುಖ್ಯ ಅಲ್ಲ. ಅದರೆ ಈಗ ಸರ್ಕಾರದವರು ಬಡವರ ಮೇಲೆ ಹೆಚ್ಚು ಗಮನ ಇಟ್ಟು ಅವರ ಬಾಳನ್ನು ಸರಿಪಡಿಸುವುದಕ್ಕೆ ಯಾವ ಯಾವ ಮಾರ್ಗಗಳಿದೆಯೋ ಅವುಗಳನ್ನೆಲ್ಲಾ ಒಂದೊಂದಾಗಿ ಕಂಡುಹಿಡಿದು ಮಾಡುತ್ತಿದ್ದಾರೆ. ಇದು ನಾವುಗಳು ಮೆಚ್ಚತಕ್ಕಂಥ ವಿಚಾರ. ಯಾವ ಒಂದು ಮೂಲತತ್ವ, ಗರೀಬಿ ಹಟಾವೊ ತತ್ವವನ್ನು ಅನುಸರಿಸಿ, ಈ 20 ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡುತ್ತಾ ಇರುವುದರಲ್ಲಿ ಈ ಒಂದು ಋಣ ವಿಮುಕ್ತಿಗೆ ಸಂಬಂಧಪಟ್ಟ ವಿಚಾರವೂ ಒಂದು ಬಹುತೇಕ ಇದರಲ್ಲಿ ಸ್ಮಾಲ್ ಫಾರ್ಮರ್ ಎಂದರೆ ಕೊಂಡ ಭೂಮಿ ಇರತಕ್ಕಂಥವರು ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್, ಲೇಬರರ್ಸ್ ಬೇಸಾಯ ಕೂಲಿ ಮಾಡತಕ್ಕಂಥ ಜನರಿಗೆ ಇವುಗಳಿಂದ ಹೆಚ್ಚಿನ ಪ್ರಯೋಜನವಾಗುತ್ತದೆ. ಈ ವೀಕರ್ ಸೆಕ್ಷನ್ಸ್ ಅನ್ನಿಸಿಕೊಂಡಂಥವರು ಏನು ಯತ್ನ ಇಲ್ಲದೆ ಅರ್ಥಿಕವಾಗಿ ಮುಗ್ಗಟ್ಟಿಗೆ ಈಡಾಗಿರತಕ್ಕ ಜನರಿಗೆ ಈ ಮೂರು; ಜನಗಳನ್ನು ಇದರಲ್ಲಿ ಬಹುಮುಖ್ಯವಾಗಿ ಅಳವಡಿಸಿದ್ದಾರೆ. ಈಗ ಚೇತರಿಸಿಕೊಳ್ಳುವುದಕ್ಕೆ, ಬೆಳಕನ್ನು ಕಾಣತ್ತಾ ಇರತಕ್ಕಂಥಹ ಈ ಮೂರು ದರ್ಜೆಯ ಜನಗಳನ್ನು ಮನಸ್ಸಿನಲ್ಲೇ ಇಟ್ಟುಕೊಂಡರೆ ಇದರಲಿ ಕೋಮುವಾರು ಭಾವನೆಗೆ ಅವಕಾಶ ಇಲ್ಲದಂತಹವರಿಗೆ ಪ್ರಯೋಜನ

ವಾಗುತ್ತದೆ ಎಂಬುದನ್ನು ಎತ್ತಿ ತೋರಿಸುವುದು ಅನಾವಶ್ಯಕ. ಇದರಲ್ಲಿ ಏನೂ ಕಾರಿ ಕಾಣದೇ ಇದ್ದಂತ ಜನಗಳಿಗೆ ಇದರಿಂದ ಹೆಚ್ಚಿನ ಆಶೆ ಮೂಡಿ ಇಷ್ಟದರೂ ಪ್ರಯೋಜನವಾಯಿತು ಎಂದು ಸರ್ಕಾರಕ್ಕೆ ಮೆಚ್ಚಿಗೆಯನ್ನು ಕೊಡತಕ್ಕಂಥ ಕಾನೂನು ಇದಾಗಿದೆ ಎಂದು ಹೇಳಬಹುದು. ಮಾನ್ಯ ಮಂತ್ರಿಯವರಾದ ಶ್ರೀ ಕೆ. ಹೆಚ್. ರಂಗನಾಥ್ ಅವರು ಈ ವಿಷಯದಲ್ಲಿ ನೊಂದ ಜನಗಳ ವಿಚಾರ ವನ್ನು ಹೆಚ್ಚಾಗಿ ತಿಳಿದುಕೊಂಡಿದ್ದಾರೆಂದು ನನಗೆ ಸಂತೋಷವಾಗಿದೆ. ಅದರೆ ಇವರು ಮಿತ ಭಾಷಗಳಾಗಿದ್ದಾರೆ. ಇವರು ಇದನ್ನೆಲ್ಲಾ ತಿಳಿದುಕೊಂಡಿದ್ದಾರೆಂದು ಜನ ಹೇಳುತ್ತಾರೆ. ನನಗೆ ಗೊತ್ತಿರುವಂತೆ ಬಡವರ ವಿಷಯದಲ್ಲಿ ಮೊದಲೇ ಕಾರ್ಯರೂಪಕ್ಕೆ ಬರಬೇಕಾಗಿದ್ದ ಈ ಕಾನೂನು ಇವರು ಮಂತ್ರಿಯಾಗಿರುವಾಗ ಈಗ ಬಂದಿದೆ ಎಂದು ಹೇಳಿದರೆ ಅದು ನಮಗೆ ಬಹಳ ಸಂತೋಷ ವನ್ನು ಉಂಟುಮಾಡುತ್ತದೆ ಇದನ್ನು ಕಾರ್ಯರೂಪಕ್ಕೆ ತರುವಾಗ ಅನೇಕ ತೊಡಕುಗಳನ್ನು ನಾವು ಕಾಣುತ್ತಿದ್ದೇವೆ. ಇದರಲಿ ಎಲ್ಲಾ ಜನಗಳೂ ಹೇಳುವ ಹಾಗೆ ಬಹಳ ಜನಗಳಿಗೆ ಇದುವರೆಗೆ ಯಾರು ಅದೃಷ್ಟವಶಾತ್ ಲೇವಾದೇವಿಗೆ ಕೊಟ್ಟಿದ್ದಾರೆ ಅವರಿಗೆ ಸ್ವಲ್ಪ ನೋವಾದರೂ ಚಿಂತೆ ಇಲ್ಲ ಎಂದು ಅಂದುಕೊಳ್ಳುತ್ತೇನೆ. ಆದರೆ ಇದರಲ್ಲಿ ಒಂದು ಅಪಾಯ ಏನು ಕಾಣುತ್ತದೆ ಎಂದರೆ ಇವತ್ತು ಎಲ್ಲಾ ಹೋಯಿತು ಮುಂದೆ ಇನ್ನಾವ ಅಪಾಯಕ್ಕೆ ಸಿಕ್ಕುತ್ತೇವೆಯೋ ಎಂದು ಜನರು ಹೇಳುತ್ತಾರೆ. ಇದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಬೇಕು. ಕೋಆಪರೇಟಿವ್ ಸೊಸೈಟಿ ಯಲ್ಲಿ ಕಂಪಲ್ಸರಿ ಮೆಂಬರ್‌ಷಿಪ್ ತೆಗೆದುಕೊಳ್ಳಬೇಕು. ಏಕೆಂದರೆ ಸಾಲ ಹುಟ್ಟುವ ಜಾಗ ಇದು ಎನ್ನುವುದನ್ನು ಸರ್ಕಾರದವರು ಮಾಡಿದ್ದಾರೆ. ಶೇರು ಬಂಡವಾಳವನ್ನು ಕೊಡಲು ಶಕ್ತಿ ಇಲ್ಲದವರಿಗೆ ಶೇರು ಕೊಡುವುದಕ್ಕೆ ಸಮಾಜಕಲ್ಯಾಣ ಇಲಾಖೆಯಿಂದ ಅವಕಾಶ ಮಾಡಿಕೊಟ್ಟಿದ್ದಾರೆ. ಇದಕ್ಕೆ ನಮ್ಮ ಮಾನ್ಯ ಸದಸ್ಯರು, ನಮ್ಮಂತಹವರೆಲ್ಲರ ಕರ್ತವ್ಯ ಎನೆಂದರೆ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಹೆಚ್ಚು ಹೆಚ್ಚಾಗಿ ಸೊಸೈಟಿಗಳಲ್ಲಿ ಸೇರಿ ಎಂದು ಪ್ರಚಾರಮಾಡಬೇಕು.

ಬಡಜನಗಳು ಸರ್ಕಾರವನ್ನು ಬೈಯ್ಯಲಿ ಎಂದು ಅವರಿಗೆ ಹೇಳಿಕೊಡುವ ಜನ ನಮ್ಮ ದೇಶ ದಲ್ಲಿದ್ದಾರೆ. ಕೊಟ್ಟವರ ಒಡವೆ ಕೊಡಬೇಡಿ ಎಂದರೆ ಆದರಿಂದ ಅವರಿಗೆ ಕಷ್ಟವಾಗುತ್ತದೆ, ನಾಳೆ ಅವರಿಗೆ ಸಾಲ ಸಿಕ್ಕುವುದಿಲ್ಲ ಎಂದು ಪ್ರಚೋದನೆ ಮಾಡುವ ಜನ ನಮ್ಮಲ್ಲಿ ಇದ್ದಾರೆ. ನಮ್ಮ ಈ ಸದನದ ಮಾನ್ಯ ಸದಸ್ಯರು ಇದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಬಡಜನಗಳ ಬಳಿಗೆ ಹೋಗಿ ಬದುಕತಕ್ಕಂಥ ಮಾರ್ಗ, ಸಾಲ ಹುಟ್ಟತಕ್ಕ ಮಾರ್ಗ ಇಲ್ಲದೆ ಎಂಬುದರ ಕಡೆಗೆ ನಮ್ಮ ಕರ್ತವ್ಯ ಮಾಡಬೇಕಾಗಿದೆ. ನೀವೆಲ್ಲರೂ ಸೊಸೈಟಿಗಳಲ್ಲಿ ಸದಸ್ಯರಾಗಿ ಸೇರಿ, ಹತ್ತು ರೂಪಾಯಿ ಬೇಕಾದರೆ 100 ರೂಪಾಯಿ ಬೇಕಾದರೆ ಸಾಲ ಕೊಡುತ್ತಾರೆ ಎಂಬ ಆಸೆಯನ್ನು ಬಡಜನಗಳ ಮನಸ್ಸಿನಲ್ಲಿ ತಂದು ಕೊಡುವಂತಹ ಕೆಲಸ ಮಾಡಬೇಕಾಗಿದೆ. ಇದು ನಮ್ಮ ಕರ್ತವ್ಯ ನನ್ನ ಗೆಳೆಯರು ಹೇಳುತ್ತಿದ್ದರು, ಯಾರೋ ಒಬ್ಬರು ವಾಲೆ ಅಡ ಇಟ್ಟುಕೊಂಡು 8-10 ರೂಪಾಯಿ ಕೊಡಿ ಎಂದು ಹೋದಾಗ ಬ್ಯಾಂಕಿನವರು ಸಾಲ ಸಿಗದೆ ಮಗು ಸತ್ತುಹೋಯಿತು ಎಂದು, ಬ್ಯಾಂಕ್ ಮ್ಯಾನೇಜರ್ ಕೂಡ ಇದ್ದಕ್ಕಿದ್ದಹಾಗೆ ಖಾಯಿಲೆ ಬಂದರೆ ರಾತ್ರಿ 1 ಗಂಟೆಯಲ್ಲಿ ಹಣ ತಂದು ಡಾಕ್ಟರಿಗೆ ಕೊಡುವುದಕ್ಕಾಗುವುದಿಲ್ಲ. ಕೆಲವು ಫಾರ್ಮಾಲಟೀಸ್ ಇದೆ. ಅದಕ್ಕೆ ನಾವು ಗೌರವ ಕೊಡಬೇಕು. 10 ಸಾವಿರ ಜನಸಂಖ್ಯೆ ಇರುವ ಕಡೆ ಮತ್ತು 50 ಸಾವಿರ ಜನಸಂಖ್ಯೆ ಇರುವ ಏರಿಯಾದಲ್ಲಿ ಫಾರ್ಮರ್ಸ್ ಬ್ಯಾಂಕ, ಸರ್ವೀಸ್ ಬ್ಯಾಂಕ್ ಕೇಂದ್ರ ಸರ್ಕಾರ ದವರು ಮಾಡುತ್ತಿದ್ದಾರೆ. ಬಡವರಿಗೆ ಅದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ಇಷ್ಟೆಲ್ಲಾ ಆದರೂ ಕೂಡ ಬಡವರ ಬಾಳಿನ ರಹಸ್ಯ ಏನು ಎಂದರೆ ಮನೆ ಪಕ್ಕದಲ್ಲಿ ಆಸ್ಪತ್ರೆ ಅದರೂ ಕೂಡ ಖಾಯಿಲೆ ಬಂದಾಗ ಆಸ್ಪತ್ರೆಗೆ ಹೋಗಿ ಮದ್ದು ಕುಡಿದರೆ ವಾಸಿಯಾಗುತ್ತದೆ ಎಂಬ ಪರಿಜ್ಞಾನ ಇಲ್ಲದೇ ಇದ್ದರೆ ಏನು ಮಾಡುವುದಕ್ಕಾಗುತ್ತದೆ? ಸಾಲ ಪಡೆದುಕೊಂಡವರು ಸಾಲ ಕೊಟ್ಟರೆ ಯಾವ ಸರ್ಕಾರವೂ ಏನೂ ಮಾಡುವುದಕ್ಕಾಗುವುದಿಲ್ಲ. ಸಾಲದಲ್ಲಿ ಸಿಕ್ಕಿ ಒದ್ದಾಡುವವರಿಗೆ ಈ ಬಿಲ್ ಸಿದ್ಧೌಷದ ಎಂಬುದು ನನ್ನ ಭಾವನೆ. ಬಡವರ ಜೀವನದಲ್ಲ ಮೂಲಭೂತ ಬದಲಾವಣೆಯನ್ನು ತರತಕ್ಕ ಈ ಮಸೂದೆಯನ್ನು ಎಲ್ಲರೂ ಮೆಚ್ಚಬೇಕು. ಇದಕ್ಕಾಗಿ ಸರ್ಕಾರಕ್ಕೆ ಮೆಚ್ಚುಗೆ ಅರ್ಪಿಸ ಬೇಕು ಎಂದು ನನಗನ್ನಿಸುತ್ತದೆ. ಒಂದು ಹೊಸ ತಿದ್ದುಪಡಿ ಲಿಸ್ಟನ್ನು ಕೊಟ್ಟಿದ್ದಾರೆ. ಇದರಲ್ಲಿ 5ನೇ ಭಾಗದಲ್ಲಿ ಹೀಗಿದೆ.

:"half hectare of land used for growing plantation crops or grape or coconut or arecanut or for growing mulberry by irrigation"

ಇರಿಗೇಷನ್ ಎಂದು ಅಷ್ಟಕ್ಕೇ ನಿಲ್ಲಿಸಿದರೆ ಸಾಲದು ಎಂದು ನನಗನ್ನಿಸುತ್ತದೆ. ಪ್ರೈವೇಟಾಗಿ ಬಾವಿ ಇದ್ದು ಅದರಿಂದ ನೀರು ಹಾಕಿ ಮಲ್ಬರಿ ಬೆಳೆದರೆ ಇರಿಗೇಷನ್ ಎಂದು ಅನಿಸುತ್ತದೆ. ಅದಕ್ಕೋಸ್ಕರ ಇರಿಗೇಷನ್ ಎಂದು ಹೇಳುವಾಗ.

ಏನೂ ವ ಸೂಚನೆ ಇಲ್ಲಿ ಬರುವುದಿಲ್ಲ ಆದ್ದರಿಂದ ಬೈ ಇರಿಗೇಷನ್ ಬೈ ಗೌರ್ನಮೆಂಟ್ ಸೋರ್ಸಸ್ ಎಂದು ಹಾಕಿದರೆ ಒಳ್ಳೆಯದು ಸಾಲ ತೆಗೆದುಕೊಂಡು ಬಾವಿ ತೆಗೆದು ಇರಿಗೇಷನ್ ಮಾಡಿ ಬೆಳೆದರೆ ಅವನಿಗೆ ಅನ್ವಯಿಸುತ್ತದೆ ಎಂಬ ಅರ್ಥ ಬರುತ್ತದೆ. ಆದುದರಿಂದ ನಾನು ಹೇಳಿದಂಥ ಅರ್ಥದಲ್ಲಿ ಇರಬೇಕು ಎಂದು ಹೇಳಿ ಸಲಹೆ ಮಾಡುತ್ತಿದ್ದೇನೆ. ಈ ಬೆಲೆ ಏನಿದು ಇದು ಬಡವರ ಬಂಧು ಎಂದು ನಾನು ಕರೆಯುತ್ತೇನೆ. ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು; ೫ ರೂಪಾಯಿ ಸಾಲ ಸಿಗಬೇಕಾದರೂ ಕೂಡ ಬಡವರಿಗೆ ಸುಲಭವಾಗಿ ಸಿಗುವ ರೀತಿಯಲ್ಲಿ ನ್ಯಾಷನಲೈಸ್ಡ್ ಬ್ಯಾಂಕಿನವರು ಮತ್ತು ಸರ್ಕಾರದವರು ಕೂಡ ವ್ಯವಸ್ಥೆ ಮಾಡುತ್ತಿದ್ದಾರೆ ಈ ಬಗ್ಗೆ ಸದನದ ಎಲ್ಲ ಸದಸ್ಯರೂ ಕೂಡ ಇದರ ಬಗ್ಗೆ ತಮ್ಮ ಕರ್ತವ್ಯವನ್ನು ಮಾಡಿ ಸರ್ಕಾರಕ್ಕೆ ನೆರವು ಕೊಡುವುದರ ಮುಖಾಂತರ ದೀನದಲಿತರು ಈ ಬಿಲ್ಲಿನಿಂದ ಆಗತಕ್ಕ ಪ್ರಯೋಜನವನ್ನು ಪಡೆದುಕೊಳ್ಳುವ ಹಾಗೆ ಮಾಡಬೇಕು ಎಂದು ನನ್ನ ಆಸೆ ನಮ್ಮ ಮುಖ್ಯ ಮಂತ್ರಿಗಳಿಗೆ ಬಡವರ ಮೇಲೆ ಆಸೆ. ಅವರಿಗೆ ಕೊರತೆಯೂ ಇದೆ ಸಮಾಜದ ರೀತಿಯಲ್ಲಿ ಎಷ್ಟು ಆಸೆ ಪಟ್ಟರೂ ಬಡವರಿಗೆ ಹೆಚ್ಚು ಸಹಾಯ ಮಾಡುವುದಕ್ಕಾಗುತ್ತಿಲ್ಲ ಎಂದು ಹೇಳುತ್ತಾರೆ ಸರ್ಕಾರದ ಜೊತೆಗೆ ಸಾರ್ವಜನಿಕರೂ ನೆರವು ಕೊಡಬೇಕು ಎಂದಾಗ ಅವರು ನಮ್ಮ ಮೇಲೆ ಕೋಪಿಸಿಕೊಂಡುಬಿಟ್ಟರು ಬಡವರ ಮೇಲೆ ಕೋಪ ಇಲ್ಲ. ಬಡವರಿಗೆ ಅನುಕೂಲ ಮಾಡಿಕೊಡುವಂತಹ ವಾತಾವರಣ ಬರಲಿಲ್ಲವಲ್ಲ ಎಂದು ತಿಳಿದುಕೊಳ್ಳುತ್ತಾರೆ. ಅದ್ದರಿಂದ ಈ ಬಿಲ್ಲಿಗೆ ಪೂರ್ಣ ಬೆಂಬಲ ಕೊಟ್ಟು ಪ್ರಾಪಗಂಡ ಮಾಡಿ ಬ್ಯಾಂಕುಗಳಿಗೆ ಸೊಸೈಟಿಗಳಿಗೆ ಅವರನ್ನು ಸೇರಿಸಿ ಅವರು ಉದ್ಧಾರವಾಗುವ ರೀತಿಯಲ್ಲಿ ಆಗಬೇಕು ಎಂದು ತಮ್ಮ ಮತ್ತು ನಮ್ಮೆಲ್ಲರ ಕರ್ತವ್ಯವನ್ನು ಇದರಲ್ಲಿ ಸೇರಿಸಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ಇಂತಹ ಬಿಲ್ಲನ್ನು ತಂದಿದ್ದಕ್ಕಾಗಿ ಮುಖ್ಯವಾಗಿ ನಮ್ಮ ಸರ್ಕಾರದವರನ್ನು, ನಮ್ಮ ಮಂತ್ರಿಗಳಾದ ಶ್ರೀಮಾನ್ ರಂಗನಾಥ್ ಅವರನ್ನು ಕೂಡ ಅಭಿನಂದಿಸಿ, ವಂದಿಸಿ ಇದನ್ನು ಬಹಳ ಎಚ್ಚರಿಕೆಯಿಂದ ಮತ್ತು ಚಾಕಚಕ್ಯತೆಯಿಂದ ಬೇಗ ಬೇಗ ಕಾರ್ಯರೂಪಕ್ಕೆ ತರಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ) :—ಮಾನ್ಯ ಅಧ್ಯಕ್ಷರೆ, ದುರ್ಬಲ ವರ್ಗದವರಿಗೆ ಹಣ ವಜಾ ಮಾಡುವ ಈ ಮಸೂದೆಯನ್ನು ನಾವೆಲ್ಲರೂ ಕೂಡ ಸ್ವಾಗತಿಸುತ್ತೇವೆ. ಇದರಲ್ಲಿ ಯಾವ ಬಿನ್ನಾಭಿಪ್ರಾಯವೂ ಇಲ್ಲ. ನಿಜವಾಗಿ ನಾವೂ ಕೂಡ ಬಡವರಿಗೆ ದುರ್ಬಲವರ್ಗದವರಿಗೆ ಸಹಾಯವಾಗಬೇಕು ಎಂದು ಸರ್ಕಾರದವರು ಉದ್ದೇಶ ಇಟ್ಟುಕೊಂಡು ಈ ಮಸೂದೆಯನ್ನು ತಂದಿದ್ದಾರೆ. ಅದೇ ರೀತಿ ಅಷ್ಟೇ ತೊಂದರೆಯೂ ಕೂಡ ಸದ್ಯಕ್ಕೆ ಆಗುತ್ತಿದೆ. ಅದನ್ನು ಸದ್ಯಕ್ಕೆ ಪರಿಹಾರ ಮಾಡಬೇಕು. ಏಕೆಂದರೆ ಸರ್ಕಾರದವರು ಈ ಮಸೂದೆ ತರುವುದಕ್ಕಿಂತ ಮುಂದೆ ಅವರು ಎಷ್ಟು ಕೋಟಿ ರೂಪಾಯಿ ಪಡೆಯುತ್ತಿದ್ದರು ಎಂದು ಅಂದಾಜಿಟ್ಟುಕೊಂಡು ಅಷ್ಟು ಸಾಲ ಅವರಿಗೆ ದೊರೆಯುವ ರೀತಿಯಲ್ಲಿ ಏರ್ಪಾಟು ಮಾಡಿದ್ದರೆ ಅವರಿಗೆ ತತ್‌ಕ್ಷಣ ಅನುಕೂಲವಾಗುತ್ತಿತ್ತು. ಈಗ ಫೆಸಲ್‌ಟೀಸಗಳೆಲ್ಲ ಪ್ಲಗ ಮಾಡಿದಹಾಗಾಗುತ್ತದೆ. ಈಗ ಸೊಸೈಟಿ ಮುಖಾಂತರ ಸಾಲ ಕೊಡುವುದಕ್ಕೆ ಅವಕಾಶವಾಗಿದೆ ಅವರು ಸೊಸೈಟಿಗೆ ಮೆಂಬರ್ ಆಗುವುದು ಯಾವಾಗ? ಸೊಸೈಟಿಗಳಿಂದ ಸಾಲ ದೊರೆಯುವುದು ಯಾವಾಗ? ಉದಾಹರಣೆಗೆ ಹೇಳುವುದಾದರೆ ಕೂಲಿ ಮಾಡುವವನಿಗೆ ಅರ್ಜೆಂಟಾಗಿ ಬೇಕಾದರೆ ೫ ರೂಪಾಯಿ ೧೦ ರೂಪಾಯಿ ಎಲ್ಲಾದರೂ ತರುತ್ತಾ ಇದ್ದವನಿಗೆ ಈಗ ಬೇರೆ ಕಡೆ ಸಾಲ ಕೇಳಿದರೆ ಅವನಿಗೆ ಸಾಲ ಹುಟ್ಟುವುದಿಲ್ಲ. ಅಂತಹವರಿಗೆ ಪ್ರೋನೋಟಿನಿಂದ ಸಾಲ ಸಿಗುತ್ತಿತ್ತು. ಬ್ಯಾಂಕಿನಲ್ಲಿ ತಕ್ಷಣ ಪ್ರೋನೋಟ್ ಅಥವಾ ಇನ್ನೊಂದರ ಮೇಲೆಯೂ ಈಗ ಸಾಲ ಕೊಡುವುದಿಲ್ಲ ಇರುವ ಸ್ಥಳದಲ್ಲಿ ಸಾಲ ಸಿಗಬೇಕಾದರೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಉದ್ದೇಶ ಒಳ್ಳೆಯದಾದರೂ ಕೂಡ ತಕ್ಷಣ ರಿಲೀಫ್ ಸಿಗುತ್ತಿಲ್ಲ. ಇವತ್ತು ಅವರು ಜೀವನ ಮಾಡುವುದು ಹೇಗೆ? ಅನೇಕ ಕೂಲಿಗಾರರಿಗೆ ಪ್ರತಿದಿನ ಕೆಲಸ ಇರುವುದಿಲ್ಲ. ಇವತ್ತು ಸಾಲ ತಂದು ನಾಳೆ ಕೂಲಿ ಮಾಡಿ ಸಾಲ ತೀರಿಸೋಣ ಎಂದರೆ ಸಾಲ ಕೊಡುವವರು ಯಾರೂ ಇಲ್ಲ. ಒಡವೆ ಮೇಲಾದರೂ ಎಲ್ಲಾದರೂ ಸಾಲ ತೆಗೆದುಕೊಳ್ಳೋಣ ಎಂದರೆ ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳೋಣ ಎಂದರೆ ಅದಕ್ಕೂ ಅವಕಾಶವಿಲ್ಲ. ಆದ್ದರಿಂದ ನಾನು ಹೇಳುವುದು ಏನೆಂದರೆ ಉದಾಹರಣೆಗೆ ಯಾರೋ ಒಬ್ಬರು ಹಸುಗಳ ಮೇಲೆ ಸಾಲ ಕೊಡುತ್ತಾರೆ ಎಂದು ಪ್ರಯತ್ನ

ಪಟ್ಟಾಗ ೫೦೦ ರೂಪಾಯಿ ಡಿಪಾಸಿಟ್ ಕಟ್ಟಿದರೆ ಕೊಡುತ್ತೇವೆ ಎಂದು ಹೇಳಿದರು. ಕೊನೆಗೆ ಮನೆಯಲ್ಲಿರುವ ಒಡವೆಗಳನ್ನು ತೆಗೆದುಕೊಂಡುಹೋಗಿ ಬ್ಯಾಂಕಿನಲ್ಲಿ ಅಥವಾ ಹೊರಗಡೆ ಸಾಲ ತೆಗೆದುಕೊಂಡು ಬರುವುದಕ್ಕೂ ಅವಕಾಶವಾಗಲಿಲ್ಲ. ಅರ್ಜೆಂಟ್ ಹಣಕೊಡಬೇಕಾಗಿತ್ತು, ಎಲ್ಲಾ ಕಡೆ ಪ್ರಯತ್ನಪಟ್ಟರೂ ಎಲ್ಲೂ ಸಾಲ ಸಿಗಲಿಲ್ಲ. ಇಂತಹ ಸಂದರ್ಭಗಳೂ ಎಷ್ಟೋ ಇವೆ.

ಎಷ್ಟೋ ಜನಕ್ಕೆ ನಂಬಿಕೆ ಮೇಲೆ ವಿಶ್ವಾಸದ ಮೇಲೆ ಸಿಕ್ಕುತ್ತಿದ್ದ ಸಾಲ ಇಂದು ನಿಂತು ಹೋಗಿದೆ. ದುರ್ಬಲ ವರ್ಗದವರ ಸಾಲವನ್ನು ವಜಾ ಮಾಡಿರುವುದು ಸಂತೋಷ, ಆದರೆ ಅವರಿಗೆ ಈಗ ಸಾಲ ಹುಟ್ಟುತ್ತಿಲ್ಲ. ಜೀವನ ಮಾಡುವುದಕ್ಕೆ ಆಗುತ್ತಿಲ್ಲ. ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ ಸರ್ಕಾರದವರು ಅವರಿಗೆ ತೊಂದರೆ ತಪ್ಪಿದೆಯೆಂದು ಯೋಚನೆ ಮಾಡಿದಷ್ಟು ತೊಂದರೆ ತಪ್ಪಿಲ್ಲ. ಆದಕಾರಣ, ತಕ್ಷಣ ಎಲ್ಲಾ ಕಡೆಯೂ, ಎಲ್ಲಾ ಪ್ರದೇಶಗಳಲ್ಲಿಯೂ ಸಾಲ ದೊರೆಯುವ ರೀತಿ ಏರ್ಪಾಡು ಮಾಡಬೇಕು, ತೊಂದರೆ ಪಡುತ್ತಿರುವವರಿಗೆ ತಕ್ಷಣ ರಿಲೀಫ್ ಕೊಡಬೇಕು. ಬ್ಯಾಂಕಿನಲ್ಲಿ ಸಿಗುತ್ತದೆ, ಸೊಸೈಟಿಯಲ್ಲಿ ಸಿಗುತ್ತದೆಂದರೆ ಅವರು ಉಳಿಯುವುದು ಕಷ್ಟವಾಗಿದೆ. ಅವರ ತೊಂದರೆಗೆ ಈ ತುರ್ತು ಪರಿಸ್ಥಿತಿಯಲ್ಲಿ ಬೇರೆ ರೀತಿ ಆಲ್ಟರ್‌ನೇಟೀವ್ ವ್ಯವಸ್ಥೆ ಮಾಡದೆ ಇದ್ದರೆ ದುರ್ಬಲ ವರ್ಗದವರಿಗೆ ಇನ್ನೂ ಹೆಚ್ಚು ತೊಂದರೆಯಾಗುತ್ತದೆಯೇ ಹೊರತು ಉಪಯೋಗ ಆದ ಹಾಗೆ ಆಗಲಿಲ್ಲ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 p.m.

† ಶ್ರೀ ಕೆ. ಹೆಚ್. ರಂಗನಾಥ್ : — (ಸಹಕಾರ ಶಾಖೆಯ ಮಂತ್ರಿಗಳು) :—

ಮಾನ್ಯ ಅಧ್ಯಕ್ಷರೇ, ಈ ಸಭೆಯ ಎಲ್ಲಾ ಸದಸ್ಯರು ಕೂಡ ಈ ಕಾನೂನನ್ನು ಸ್ವಾಗತ ಮಾಡಿದ್ದಾರೆ. ಎಲ್ಲಾ ಕಲಮುಗಳನ್ನು ಕೂಡ ಸ್ವಾಗತಿಸಿದ್ದಾರೆ. ಕೆಲವು ಮಿತ್ರರು ಮಾತನಾಡುತ್ತಾ ಇದರ ಒಂದು ಪರಿಮಿತಿ ವಿಸ್ತಾರವಾಗಬೇಕಿತ್ತು ಅಂದರೆ ವರಮಾನ ೨೪೦೦ ರೂಪಾಯಿಗಳಿಗಿಂತ ಸ್ವಲ್ಪ ಜಾಸ್ತಿ ಆಗಬೇಕಿತ್ತು ಮತ್ತು ಭೂಮಿ ಯೂನಿಟ್ಟನ್ನು ೨ ಹೆಕ್ಟೇರಿಗೆ ಏನು ಸೀಮಿತ ಮಾಡಿದ್ದಾರೆ ಅದೂ ಕೂಡ ಜಾಸ್ತಿ ಆಗಬೇಕಿತ್ತು ಎನ್ನುವುದನ್ನು ಪ್ರಸ್ತಾಪಿಸಿದ್ದಾರೆ. ಅಧ್ಯಕ್ಷರೇ, ತಾವು ಗಮನಿಸಿರಬಹುದು, ಮೊನ್ನೆ ತಾನೇ ಆಂಧ್ರದಲ್ಲೂ ಕೂಡ ಇಂಥ ಕಾನೂನನ್ನು ಮಾಡಿದ್ದಾರೆ, ಅಲ್ಲಿ ಕೇವಲ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕಾನೂನು ಬಂದಿದೆ. ಆದರೆ ನಮ್ಮ ರಾಜ್ಯದಲ್ಲಿ ರೈತರು, ಕೃಷಿ ಕೂಲಿಗಾರರು ಮತ್ತು ಬೇರೆ ಉದ್ಯೋಗಗಳನ್ನು ಅವಲಂಬಿಸಿರುವವರಿಗೆ ಯಾರಿಗೆ ವರ್ಷಕ್ಕೆ ೨೪೦೦ ರೂಪಾಯಿ ವರಮಾನ ಬರುತ್ತದೋ ಅವರಿಗೆಲ್ಲಾ ಈ ಕಾನೂನು ಅನ್ವಯವಾಗಿದೆ. ಹೀಗಾಗಿ ಇದರ ವ್ಯಾಪಕತೆ ಹೆಚ್ಚಾಗಿದೆ, ವಿಸ್ತಾರ ಹೆಚ್ಚಾಗಿದೆ, ಇದರಿಂದ ಸುಮಾರು ಒಂದು ಕೋಟಿ ಜನರಿಗೆ ಉಪಕಾರವಾಗುತ್ತದೆ ಎನ್ನತಕ್ಕ ಒಂದು ಅಂದಾಜು ಇದೆ. ಇವತ್ತು ಸಣ್ಣ ಹಿಡುವಳಿದಾರರ ಬಗ್ಗೆ ವಿಚಾರ ಮಾಡುವುದಾದರೆ ಬೇರೆ ಭಾಗದಲ್ಲಿ ಹೆಚ್ಚು ಜನರಿಗೆ ಅನುಕೂಲವಾಗುತ್ತಿರುವುದೂ ಕೂಡ ಕಂಡುಬರುತ್ತದೆ ಮತ್ತೆ ಕೆಲವು ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಾ ಕೆಲವರು ಲೇವಾದೇವಿ ಉದ್ದೇಶದಿಂದ ಮಾಡುವುದಿಲ್ಲ, ಕೈಸಾಲ ಕೊಟ್ಟಿರುತ್ತಾರೆ, ಅಂಥವರಿಗೆ ತೊಂದರೆಯಾಗುತ್ತದೆ ಎನ್ನುವ ವಿಚಾರವನ್ನು ಹೇಳುತ್ತಿದ್ದರು. ಮತ್ತೆ ಇನ್ನು ಕೆಲವರು ಹೆಚ್ಚು ಶ್ರೀಮಂತರಲ್ಲದೆ ಸಣ್ಣ ಪುಟ್ಟ ವರ್ಗಕ್ಕೆ ಸೇರಿದಂಥ ಜನರಿಗೆ ಲೇವಾದೇವಿ ಮಾಡಲು ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದರು ಇಂಥ ಕಾನೂನುಗಳು ಬಂದಾಗ ಕೆಲವರಿಗೆ ತೊಂದರೆ ಯಾಗುವುದು ಸ್ವಾಭಾವಿಕ, ಯಾರಿಗೂ ತೊಂದರೆಯಾಗದಂತೆ ಕಾನೂನು ತರುವುದು ಕಷ್ಟದ ಕೆಲಸ. ಆದರೆ ಹೆಚ್ಚು ಜನಕ್ಕೆ ಉಪಕಾರವಾಗಿದೆಯೇ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ ಇದರಿಂದ ಹೆಚ್ಚು ಜನಕ್ಕೆ ಉಪಕಾರವಾಗುತ್ತದೆ ಮತ್ತು ಸ್ವಲ್ಪ ಜನಕ್ಕೆ ಅಲ್ಲಿ ಇಲ್ಲಿ ತೊಂದರೆಯಾಗುತ್ತದೆ. ಅದನ್ನು ಅಷ್ಟು ಗಮನಿಸಬೇಕಾದುದಿಲ್ಲ ಎಂದು ನನ್ನ ಒಂದು ಅಭಿಪ್ರಾಯ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಗೇಣಿಯ ಬಾಕಿಯನ್ನು ಕೂಡ ಇದಕ್ಕೆ ಒಳಪಡಿಸಬೇಕಾಗಿತ್ತು ಎಂದು ಹೇಳಿದರು ಅದು ನಮ್ಮ ಈ ಒಂದು ಡೆಟ್ ಆರ್ಡದಲ್ಲಿ ಬರುವುದಿಲ್ಲ. ಅದು ಮಾಡಿರತಕ್ಕ ಸಾಲ ಅಲ್ಲ. ಗೇಣಿದಾರ ಭೂಮಾಲೀಕ ಗೆ ಕೊಡಬೇಕಾದ ರೆಂಟ್, ಅದನ್ನು ಇದರಲ್ಲಿ ಒಳಪಡಿಸತಕ್ಕದ್ದು ಸಾಧುವಾದುದಲ್ಲ ಎಂದು ಹೇಳುತ್ತೇನೆ. ಶ್ರೀಮಾನ್ ಶೀರ್‍ನಾಳಿ ಚಂದ್ರಶೇಖರ್‌ರವರು ೨೪೦೦ ರೂಪಾಯಿಗಳ ವರಮಾನದ ಬಗ್ಗೆ ಪ್ರಸ್ತಾಪಿಸುತ್ತಾ, ಕೂಲಿ ಮಾಡುವವನ ವರಮಾನವೂ ಕೂಡ ವರ್ಷಕ್ಕೆ ೨೪೦೦ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆಂದು ಹೇಳಿದರು. ಆದರೆ ಈವತ್ತು ಸರ್ಕಾರ ಎಲ್ಲಾ ವಿಚಾರಗಳನ್ನು ಸಮರ್ಪಕವಾಗಿ ತೆಗೆದುಕೊಂಡು ವಿಚಾರ

ಮಾಡಿದೆ ಎಂದು ಅಲ್ಲ. ಹಿಂದಿನ ಪರಿಸ್ಥಿತಿಯಲ್ಲಿ ಸ್ವಲ್ಪಮಟ್ಟಿಗೆ ಜನತೆಗೆ ಉಪಕಾರ ಮಾಡುವ ದೃಷ್ಟಿಯನ್ನು ಗಣನೆಗೆ ತೆಗೆದುಕೊಂಡು ೨೪೦೦ ರೂಪಾಯಿ ಮತ್ತು ೨ ಎಕರೆ ಭೂಮಿಯ ಮಿತಿಯನ್ನು ಇಟ್ಟು ಕಾನೂನು ಮಾಡಿದೆ ಶ್ರೀ ಪ್ರಭಾಕರ್‌ರವರು ಮಾತನಾಡುತ್ತಾ ಮಲ್ಬರಿ ಇರಿಗೇಶನ್ ಬಗ್ಗೆ ಹೇಳಿದರು. ಅದಕ್ಕೆ ನಾನೇ ಒಂದು ತಿದ್ದುಪಡಿ ನೋಟೀಸನ್ನು ಕೊಟ್ಟಿದ್ದೇನೆ. ಅದರಲ್ಲಿ ಈಗಿರತಕ್ಕ ಆರ್ಡಿನೆನ್ಸ್ ಬೇರೆ ಅರ್ಥ ಬರುವ ಹಾಗೆ ಇರಲಿಲ್ಲ ಅರ್ಧ ಹೆಕ್ಟೇರ್ ಎಂದರೆ ಕುಷ್ಕಿಯಲ್ಲಿ ಮಲ್ಬರಿ ಇರತಕ್ಕವರಿಗೆ ಅನುಕೂಲವಾಗುತ್ತಿರಲಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪಿಸಿದ ಮೇಲೆ ಅರ್ಧ ಎಕರೆ ಬೈ ಇರಿಗೇಷನ್ ಎನ್ನುವ ಮಾತನ್ನು ಅಳವಡಿಸಿದ್ದೇವೆ ಅರ್ಧ ಎಕರೆ ಇರಿಗೇಟೆಡ್ ಲ್ಯಾಂಡಿನಲ್ಲಿ ೨೪೦೦ ರೂಪಾಯಿಗಳಿಗಿಂತಲೂ ಹೆಚ್ಚು ವರಮಾನ ಬರುತ್ತದೆ. ಕುಷ್ಕಿಯಲ್ಲಿ ಬೆಳೆಯುತಕ್ಕ ಮಲ್ಬರಿಯಲ್ಲಿ ಅಷ್ಟು ವರಮಾನ ಬರುವುದಿಲ್ಲ. ಇದಕ್ಕೆ ಹೆಚ್ಚು ವ್ಯಾಪಕ ಅರ್ಥ ವಿವರಣೆ ಕೊಡುವುದು ಅನವಶ್ಯಕ. ಬಾವಿಯಿಂದ ಎನ್ನುವ ಮಾತನ್ನು ಹೇಳುತ್ತಾರೆ. ಇರಿಗೇಟೆಡ್ ಎಂದರೆ ಬಾವಿ ಮತ್ತು ಸರ್ಕಾರದ ಆಶ್ರಯದಿಂದ ಯಾರಿಗೆ ನೀರಿನ ಅನುಕೂಲ ಬರುತ್ತದೋ ಅದೆಲ್ಲವೂ ಇದರ ಅಡಿಯಲ್ಲಿ ಬರುತ್ತದೆ. ಈ ಬಗ್ಗೆ ಹೆಚ್ಚು ವಿವರಣೆ ಕೊಡುವುದು ಸಾಧುವಾದುದಲ್ಲ ಇಷ್ಟು ಮಾತನ್ನು ಸಭೆಯ ಗಮನಕ್ಕೆ ತಂದು ಮಾನ್ಯ ಸಭೆಯ ಎಲ್ಲ ಸದಸ್ಯರೂ ಕೂಡ ಈ ಒಂದು ಕ್ರಾಂತಿಕಾರಕ ಕಾನೂನು ಏನು ಇದೆ ಅದಕ್ಕೆ ಅವರು ಅನುಮೋದನೆ ಕೊಟ್ಟಿದ್ದಕ್ಕೆ ನನ್ನ ವಂದನೆಗಳನ್ನು ಸಮರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—I will put the consideration motion to the vote of the House. The question is :

> "That the Karnataka Debt Relief Bill, 19 6, be taken into consideration."

The motion was adopted

Clause 2

Mr. DEPUTY SPEAKER.—I will take up clause by clause.

Mr. DEPUTY SPEAKER.—The question is : That clause 2 do stand part of the Bill.

The motion was adopted

(Clause 2 was added to the Bill)

CLAUSE 3

Mr. DEPUTY SPEAKER.—There is an amendment by the Minister. The Hon. Minister may move it.

SRI K. H. RANGANATH.—I move :

CLAUSE 3

(*i*) In the sub-clause (e), for the Explanation the following explanation shall be substituted, namely :—

"*Explanation*.—Where a person holds more than one category of land referred to in clause (f), the extent of land held by him shall be determined according to the following formula namely :—

Two hectares of unirrigated lands = one and one-fourth hectares of rainfed wet land-half hectare of land having facilities for growing

one irrigated crop=half hectare of land unused for growing plantation crops or grape or coconut or arecanut or for growing mulberry by irrigation=quarter hectare of land having perennial irrigation facilities or facilities for growing more than one irrigated crop in a year.";

(*ii*) For sub-clause (f), the following sub-clause shall be substituted namely :—

(f) 'Unit' means :—

(i) two hectares of unirrigated lands; or

(ii) one and one-fourth hectares of rainfed wet lands; or

(iii) half hectare of land having facilities for growing one irrigated crop; or

(iv) half hectare of land used for growing plantation crops or grapes or coconut or arecanut; or

(v) half hectare of land used of growing mulberry by irrigation; or

(vi) quarter hectare of land having perennial irrigation facilities or facilities for growing more than one irrigated crop in a year;

Explanation.—In this clause 'plantation crop' means cardamum, coffee, rubber and tea;"

Mr. DEPUTY SPEAKER :—Amendment moved :

(*i*) In sub-clause (e), for the Explanation the following explanation shall be substituted, namely :—

"*Explanation*.—Where a persone holds more than one category of land referred to in clause (f), the extent of land held by him shall be determined according to the following formula namely :—

Two hectares of unirrigated lands=one and one-fourth hectares of rained wet land-half hectare of land having facilities for growing one irrigated crop=half hectare of land unused for growing plantation crops or grape or coconut or arecanut or for growing mulberry by irrigation=quarter hectare of land having perennial irrigation facilities or facilities for growing more than one irrigated crop in a year.";

(*ii*) For sub-clause (f), the following sub-clause shall be substituted, namely :—

(f) 'Unit' means—

(i) two hectares of unirrigated lands; or

(ii) one and one-forth hectares of rainfed wet lands; or

(iii) half hectare of land having facilities for growing one irrigated crop; or

(iv) half hectare of land used for growing plantation crops or grapes or coconut or arecanut; or

(v) half hectare of land used for growing mulberry by irrigation or

(vi) quarter hectare of land having perennial irrigation facilities or facilities for growing more than one irrigated crop in a year;

Explanation.—In this class 'plantation crop' means cardamum, coffee, rubber and tea;"

Mr. DEPUTY SPEAKER.—I will put the amendment to the vote of the House. The question is:

That (*i*) In sub-clause (e), for the Explanation the following explanation shall be substituted, namely :—

"*Explanation* —Where a person holds more than one category of land referred to in clause (f), the extent of land held by him shall be determined according to the following formula namely :—

Two hectares of unirrigated lands=one and one-fourth hectares of rainfed wet land-half hectare of land having facilities for growing one irrigated crop=half hectare of land unused for growing plantation crops or grape or coconut or arecanut or for growing mulberry by irrigation=quarter hectare of land having perennial irrigation facilities or facilities for growing more than one irrigated crop in a year";

(*ii*) For sub-clause (f), the following sub-clause shall be substituted namely :—

(f) 'Unit' means —

(i) two hectares of unirrigated lands, or

(ii) one and one-fourth hectares of rainfed wet lands; or

(iii) half hectare of land having facilities for growing one irrigated crop, or

(iv) half hectare of land used for growing plantation crops or grapes or coconut or arecanut; or

(v) half hectare of land used for growing mulberry by irrigation; or

(vi) Quarter hectare of land having perennial irrigation facilities or facilities for growing more than one irrigated crop in a year;

Explanation.—In this clause 'plantation crop' means cardamum. coffee, rubber and tea;"

The amendment was adopted

MR. DEPUTY SPEAKER:—The question is :

"That clause 3, as amended, do stand part of the Bill."

The motion was adopted

(Clause 3, as amended, was added to the Bill).

Clause 4

SRI H. T. KRISHNAPPA.—Sir, I beg to move :

"That Explanation to item (f) be renumbered as Explanation No. (i) and after the explanation the following may be added :

Explanation (ii) "Nothing in this Section shall apply to any creditor whose income is not more than three thousand five hundred rupees per annum."

MR DEPUTY SPEAKER.—Amendment moved :

"That Explanation to item (f) be renumbered as Explannation No (i) and after the explanation the following may be added" ;

Explanation (ii) "Nothing in this Section shall apply to any creditor whose income is not more than three thousand five hundred rupees per annum."

ಶ್ರೀ ಎಚ್. ಟಿ ಕೃಷ್ಣಪ್ಪ.—ನಾನು ನಿನ್ನೆಯ ದಿವಸ ಈ ಮಸೂದೆಯ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಹೇಳಿದ್ದೇನೆ ಮಾನ್ಯ ಮಂತ್ರಿಗಳು ಒಂದು ವಿಚಾರವನ್ನು ಹೇಳಿದರು ಇಂಥಾ ಒಂದು ಪ್ರಗತಿಪರವಾದ ಮಸೂದೆ ಬಂದಾಗ ಸಮಾಜದ ಕೆಲವು ಜನಗಳಿಗೆ ಸ್ವಲ್ಪ ಅನಾನುಕೂಲವಾಗುತ್ತದೆ ಅದನ್ನು ತಪ್ಪಿಸುವುದು ಅನಿವಾರ್ಯ ಎಂದು ಹೇಳಿದರು. ಅನಿವಾರ್ಯದ ಪರಿಸ್ಥಿತಿ ಏನೂ ಇಲ್ಲ. ಒಂದು ವರ್ಗದ ಜನಗಳಿಗೆ ನ್ಯಾಯವನ್ನು ದೊರಕಿಸುವುದಕ್ಕೆ ಸಾಧ್ಯ ಇದೆ. ನಾನು ತಮಗೆ ಹೇಳುವುದಾದರೆ ಮಾನ್ಯ ಮಂತ್ರಿಗಳು ಬಂದಿರತಕ್ಕ ಹಿರಿಯೂರು, ಚಳ್ಳಕೆರೆ ಭಾಗವಾಗಲೀ. ಮಾನ್ಯ ಮುಖ್ಯ ಮಂತ್ರಿಗಳು ಬಂದಿರತಕ್ಕ ಕಲ್ಲಹಳ್ಳಿಯಾಗಲೀ ಈ ಬಗ್ಗೆ ವಿಚಾರ ಮಾಡಬೇಕು. ಸಾವಿರಾರು ರೂಪಾಯಿಗಳ ಲೇವಾದೇವಿ ಮಾಡತಕ್ಕವರಿಗೆ ರಕ್ಷಣೆಯನ್ನು ಕೊಡಬೇಕು ಎಂದು ನಾನು ಹೇಳುವುದಿಲ್ಲ. ಒಂದು ವರ್ಷಕ್ಕೆ ೧೦೦ ರೂಪಾಯಿಗಳಿಂದ ೫೦೦ ರೂಪಾಯಿಗಳವರೆಗೆ ಉಳಿತಾಯ ಮಾಡಿ ಲೇವಾದೇವಿ ಮಾಡಿ

ಆದರಿಂದ ಬಂದ ಸ್ವಲ್ಪ ಹಣವನ್ನು ಮುಂದಿನ ಪೀಳಿಗೆ ಕಷ್ಟಕಾಲ ಬಂದಾಗ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಕೂಡಿಟ್ಟಿದ್ದಾರೆ. ಎಲ್ಲರೂ ಸರಳ ಜೀವನವನ್ನು ಮಾಡಬೇಕು ಎಂದು ಮಾನ್ಯ ಮಂತ್ರಿಗಳೇ ಹೇಳುತ್ತಾರೆ. ಹೀಗೆ ಅವರು ಸರಳ ಜೀವನ ಮಾಡಿ ಉಳಿಸಿದಂತಹ ಸ್ವಲ್ಪ ಹಣವನ್ನು ಲೇವಾದೇವಿ ಮಾಡುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಪಂಚಾಯಿತಿ ಸೊಸೈಟಿಗಳಲ್ಲಿ ಡಿಪಾಜಿಟ್ ಹಾಕಿದರೆ ಅದು ಸಾಲ ತೆಗೆದುಕೊಳ್ಳುವನರಿಗೆ ಸಿಕ್ಕುತ್ತದೆ. ಅವರಿಗೂ ಅನುಕೂಲವಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ಒಂದು ವರ್ಷಕ್ಕೆ ೪ ಸಾವಿರ ೫ ಸಾವಿರ ರೂಪಾಯಿಗಳ ಆದಾಯವನ್ನು ಪಡೆಯುವವರಿಗೆ ರಕ್ಷಣೆ ಕೊಡಬೇಡಿ, ತಾವು ಖರ್ಚು ಮಾಡತಕ್ಕ ಹಣದಲ್ಲಿ ಉಳಿತಾಯ ಮಾಡಿ ೧೦೦ ರೂಪಾಯಿಗಳಿಂದ ೫೦೦ ರೂಪಾಯಿಗಳ ಲೇವಾದೇವಿಯನ್ನು ಮಾಡತಕ್ಕವರಿಗೆ ರಕ್ಷಣೆಯನ್ನು ಕೊಡಿ ಎಂದು ನಾನು ಕೇಳುತ್ತಾ ಇರುವುದು. ಇಂಥವರಿಗೆ ರಕ್ಷಣೆಯನ್ನು ಕೊಡುವುದಾದರೆ, ಈ ಕಾನೂನು ಅವರಿಗೆ ಅನ್ವಯ ಆಗದ ಹಾಗೆ ಮಾಡುವುದಾದರೆ ಅವರು ಸ್ವಲ್ಪ ಹಣವನ್ನು ಕೂಡಿಸಿ ಬೆರೆಯುವರಿಗೆ ತೊಂದರೆಯಲ್ಲಿರುವ ಜನಗಳಿಗೆ ಸಹಾಯ ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಸಾಲ ಕೊಡುವವರೂ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಒನ್‌ವೇ ಟ್ರಾಫಿಕ್ ಇಲ್ಲ. ಕೊಡುವುದು ತೆಗೆದುಕೊಳ್ಳುವುದು ಎರಡೂ ಉಂಟು. ಈ ರೀತಿ ಸಣ್ಣ ಸಣ್ಣ ೧೦೦ ರೂಪಾಯಿಗಳ ಲೇವಾದೇವಿ ಮಾಡತಕ್ಕವರಿಗೆ ಈ ಕಾನೂನು ಅನ್ವಯ ಮಾಡದೆ ರೈತರಿಗೆ ಯಾವ ವಿಧವಾದ ಅಡ್ಡಿ ಆತಂಕಗಳೂ ಬಾರದ ಹಾಗೆ ವ್ಯವಹಾರ ಸಲಿಸಾಗಿ ನಡೆದುಕೊಂಡು ಹೋಗುವ ಹಾಗೆ ಅನುವು ಮಾಡಿಕೊಡುವುದು ತಮ್ಮ ಮುಖ್ಯ ಕರ್ತವ್ಯ. ಇದನ್ನು ನಾನು ನನ್ನ ಕರ್ತವ್ಯದ ದೃಷ್ಟಿಯಿಂದ ಹೇಳುತ್ತೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ತಿದ್ದುಪಡಿಯನ್ನು ಕೊಂಡರೆ ಬಹು ಜನರಿಗೆ ಅನುಕೂಲ ಮಾಡಿಕೊಟ್ಟಹಾಗೆ ಆಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಪುಟ್ಟ ರೈತರು ಇರುತ್ತಾರೆ ಅವರು ಪರಸ್ಪರ ಒಂದು ಸಹಕಾರದಿಂದ ವ್ಯವಹಾರ ನಡೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳನ್ನು ಈ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಇದು ನಮ್ಮ ಈ ಕಾನೂನಿನ ತತ್ವಕ್ಕೆ ವಿರೋಧವಾಗುತ್ತದೆ. ನಾವು ಡೆಟರುಗಳಿಗೆ ಬೆನಿಫಿಟ್ ಕೊಡುತ್ತೇವೆಯೇ ಹೊರತು ನಾವು ಕ್ರೆಡಿಟರ್ಸ್‌ಗೆ ಯಾವ ಬೆನಿಫಿಟ್ ಕೊಡುವುದಿಲ್ಲ. ಈ ದೃಷ್ಟಿಯಿಂದ ಮಾನ್ಯ ಕೃಷ್ಣಪ್ಪನವರು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

MR. DEPUTY SPEAKER.—The question is :

"That the Explanation to item (f) be renumbered as Explanation No. (i) and after the explanation the following may be added" :

Explanation (ii) 'Nothing in this Section shall apply to any creditor whose income is not more than three thousand five hundred rupees per annum"

The amendment was negatived

MR. DEPUTY SPEAKER.—The question is :

"That clause 4 do stand part of the Bill."

The motion was adopted

Clause 4 was added to the Bill.

Clause 5

MR. DEPUTY SPEAKER.—There is a Government amendment. The Honble Minister may move it.

SRI K. H. RANGANATH.—Sir, I beg to move :

That after sub-clause (4), the following sub-clause shall be interested, namely :—

"(4A) Every creditor referred to in clause (f) of section 4, shall within forty-five days from the 1st day of March, 1976 shall furnish to the Sub-Divisional Magistrate having jurisidction over the area where such creditor ordinarily resides a statement containing the name of all the debtors who have mortgaged properties to him, the full description of such properties, the amount advanced and due as on 21st October, 1975 and such other particulars as may be prescribed. On receipt of such statement, the Sub-Divisional Magistrate shall, by order, determine which of the debtors are entitled to the relief under section 4 and direct the creditor to make an endorsement of discharge on the mortgage deed and deliver the same to the debtor. Where such property is in possession of the creditor he shall deliver the same to the debtor. If the creditor fails so to do, the Sub-Divisional Magistrate shall himself record the fact of discharge and issue a certificate to that effect to the debtor and also deliver possession of the property to the debtor by using such force as may be necessary".

MR. DEPUTY SPEAKER.—Amendment Moved.

"That after sub clause (4), the following sub-clause shall be inserted, namely.—

"(4A) Every creditor referred to in clause (f) of section, shall within forty-five days from the 1st day of March; 1976 shall furnish to the Sub-Divisional Magistrate having jurisidction over the area where such creditor ordinarily resides a statement containing the name of all the debtors who have mortgaged properties to him, the full description of such properties, the amount advanced and due as on 21st October, 1975 and such other particulars as may be prescribed On receipt of such statement, the Sub—Divisional Magistrate shall, by order, determine which of the debtors are entitled to the relief under section 4 and direct the creditor to make an endorsement of discharge on the mortgage deed and deliver the same to the debtor. Where such property is in possession of the creditor he shall deliver the same to the debtor. If the creditor fails so to do, the Sub-Divisional Magistrate shall himself record the fact of discharge and issue a certificate to that effect to the debtor and also deliver possession of the property to the debtor by using such force as may be necessary"

SRI KAGOD THIMMAPPA — I want a clarification. Does the debto mean a debtor as defined in this Act or does it mean all categories o debtors?

SRI K. H. RANGANATH.— It refers to all the debtors who have mortaged properties.

ಶ್ರೀ ಎಚ್. ಕೃಷ್ಣಪ್ಪ.— ಮಾನ್ಯ ಮಂತ್ರಿಗಳು ತಂದಿರತಕ್ಕಂಥಾ ತಿದ್ದುಪಡಿಯನ್ನು ನಾನ ಸ್ವಾಗತ ಮಾಡುತ್ತೇನೆ. ಒಂದು ವಿಚಾರವನ್ನು ನಾನು ಮಾನ್ಯ ಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ತಿಳಿಸುತ್ತೇನೆ. ಈಗ ಈ ಕಾನೂನಿನಲ್ಲಿ ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟರಿಗೆ ಏನು ಅಧಿಕಾರವನ್ನು ಕೊಟ್ಟಿದ್ದಾರೆ ಅದು ದುರುಪಯೋಗವಾಗುವಂತಹ ಸನ್ನಿವೇಶ ಬರಬಹುದು. ಎನ್ನತಕ್ಕ ಆತಂಕವನ್ನು ನಾನು ವ್ಯಕ್ತಪಡಿಸುತ್ತೇನೆ. ಅದಕ್ಕೋಸ್ಕರವಾಗಿ ನಾನು ಕೇಳಿಕೊಳ್ಳುತ್ತೇನೆ ಈಗ ಈ ಕಾನೂನಿನಲ್ಲಿ ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟರಿಗೆ ಏನು ಅಧಿಕಾರವನ್ನು ಕೊಟ್ಟಿದ್ದಾರೆ ಆ ಅಧಿಕಾರವನ್ನು ಅವರಿಗೆ ಕೊಡುವ ಬದಲು ಜುಡಿಸಿಯಲ್ ಮಾಜಿಸ್ಟ್ರೇಟರಿಗೆ ವಹಿಸಿಕೊಡತಕ್ಕದ್ದು ಹೆಚ್ಚು ಸರಿಯಾಗಿ ಕಾಣಬಹುದು ಎನ್ನುವ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ಆ ರೀತಿ ಮಾಡುವುದಾದರೆ ಯಾವ ತರಹ ಅನ್ಯಾಯಗಳೂ ಮತ್ತು ಪ್ರಭಾವಗಳು ನಡೆಯುವುದಕ್ಕೆ ಅವಕಾಶವಿರುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.— ವೀಕರ್ ಸೆಕ್ಷನ್ನಿಗೆ ಅನುಕೂಲವಾಗತಕ್ಕಂಥಾ ಮತ್ತು ನ್ಯಾಯ ದೊರಕಿಸಿಕೊಡುವುದಕ್ಕೆ ತಾವು ಪ್ರಯತ್ನ ಮಾಡಿದರೂ ಕೂಡ ವೀಕರ್ ಸೆಕ್ಷನ್ನಿಗೆ ದುರುಪಯೋಗ ಆಗತಕ್ಕ ಅವಕಾಶ ಇದೆ. ಇದನ್ನು ತಡೆಗಟ್ಟಿದ್ದೀರಾ?

ಶ್ರೀ ಕೆ. ಎಚ್. ರಂಗನಾಥ್.—ಆ ರೀತಿ ದುರುಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಕ್ರೆಡಿಟರ್ಸ್ ಲಿಸ್ಟನ್ನು ಕೊಡಬೇಕೆಂದು ಸರಕ್ಯುಲರ್ ಇಷ್ಯೂ ಮಾಡಿದ್ದೇವೆ. ರೂಲ್ಸ್‌ನಲ್ಲಿಯೂ ಪ್ರೆಸ್ಕ್ರೈಬ್ ಮಾಡುತ್ತೇವೆ. ಇದರಲ್ಲಿ ಡೆಟರಿಗೆ ಬೆನಿಫಿಟ್ ಬರುತ್ತದೆ. ಅವನು ಕೊಟ್ಟ ಲಿಸ್ಟನ್ನು ಡೆಟರ್ ಕೊಡಬೇಕು, ಡೆಟರ್ ಸಮಜಾಯಿಷಿ ಕೊಡಬೇಕು, ಅದನ್ನು ಎನ್‌ಕ್ವೈರಿ ಮಾಡಬೇಕು ಎಂದು ಇನಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಇದರ ಬಗ್ಗೆ ಏನು ಭಾವನೆಯನ್ನು ತಳೆದಿದ್ದಾರೆ ಅದಕ್ಕೆ ಅವಕಾಶವಾಗುವುದಿಲ್ಲ. ಇದನ್ನೆಲ್ಲಾ ವಿಚಾರ ಮಾಡಿ ಸರ್ಕ್ಯುಲರ್ ಇನ್‌ಸ್ಟ್ರಕ್ಷನ್ ಕೊಟ್ಟಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟಿಗೆ ಅಧಿಕಾರ ಕೊಡಬೇಕು. ಇಲ್ಲದಿದ್ದರೆ ಕ್ರೆಡಿಟರ್ ಅಭಾವಕ್ಕೆ ಒಳಗಾಗಬಹುದು ಎನ್ನುವ ಶಂಕೆ ಇದೆ. ಸಮಾಜದಲ್ಲಿ ಧನಿಕರು ಅಧಿಕಾರದಲ್ಲಿರತಕ್ಕವರೂ ಇರುತ್ತಾರೆ. ಅವರ ಪ್ರಭಾವಕ್ಕೆ ಒಳಗಾಗಬಹುದು. ಆದುದರಿಂದ ಜುಡಿಶಿಯಲ್ ಮಾಜಿಸ್ಟ್ರೇಟರಿಗೆ ಅಧಿಕಾರ ಕೊಡಬಾರದು ಎಂದು ಹೇಳಿದ್ದು.

ಶ್ರೀ ಕೆ. ಎಚ್. ರಂಗನಾಥ್. — ನಾವು ಅಡಿಷನಲ್ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ಕೊಟ್ಟುಬಿಟ್ಟರೆ ವಿಳಂಬವಾಗುತ್ತದೆ. ಇದು ತಕ್ಷಣ ಆಗತಕ್ಕಂಥ ಕೆಲಸಗಳು. ಹೆಚ್ಚು ವಿಳಂಬವಾಗಬಾರದು.

MR. DEPUTY SPEAKERS.—The questien is :

"That after sub-clause (4), the following sub-clause shall be inserted, namly.—

"(4A) Every creditor reffered to in clause (f) of section 4, shall within forty-five days from the Ist day of March 1976 shall furnish to the Sub-Divisional Magistrate having jurisdiction over the area where such creditor ordinarily resides a statement containing the name of all the debtors who have mortgaged properties to him, the full discription of such properties, the amount advanced and due as on 21st October, 1975 and such other particulars as may be prescribed

On receipt of such statement, the Sub-Divisional Magistrate shall by order, determine which of the debtors are entitled to the relief under section 4 and direct the creditor to make on endorsement of discharge on the mortgage deed and deliver the some to the debtor. Where such property is in possession of the creditor he shall deliver the same to the debtor. If the creditor fails so to do, the Sub-Divisional Magistrate shall himself record the fact of discharge and issue a certificate to that effect to the debtor and also deliver possession of the property to the debtor by using such force as may be necessary."

MR. DEPUTY CHAIRMAN.—The question is :

"That clause 5 as amended, do stand part of the bill."

The motion was adopted.

Clause 5 as amended *clause* 6 *to 10* was added to the Bill.

MR. DEPUTY CHAIRMAN.—The question is :

"That clause 6 to 10, both inclusive, do stand part of the Bill"

The motion was adopted.

Clauses 6 to 10 were added to the Bill.

MR. DEPUTY CHAIRMAN.—The question is :

"That clause 1, the Long Title, the Preamble and the Enacting Formula, do stand part of the Bill."

The motion was adopted.

Clause 1, the long Title and the Preamble and the Enacting Formula were added to the Bill.

Motion to pass.

SRI K. H. RANGANATH.—I beg to move :

"That the Karnataka Debt Relief Bill, 1976, as amended, be passed."

MR. DEPUTY SPEAKER.—The question is :

"That the Karnataka Debt Relief Bill, 1976, as amended, be passed."

The motion was adopted.

and the Bill as amended was passed.